# 14

# ಆತ್ಮದ ಮನಸ್ಸಿನಿಂದ ಹೊಸದಾಗಿರುವದು

# (4:17-32)

ಎಫೆಸದವರು ತಮ್ಮ ಕರೆಯುವಿಕೆಯಲ್ಲಿ ಯೋಗ್ಯವಾಗಿ ನಡೆದಿದ್ದಾದರೆ (4:1, 2), ಅವರು ಐಕ್ಯವುಳ್ಳವರಾಗಿರುವದು ಮಹತ್ವವುಳ್ಳದ್ದಾಗಿದೆ (4:3-6, 13-16). ಪ್ರತಿಯೊಬ್ಬ ಕ್ರೈಸ್ತರಿಗೂ ಕೂಡಾ ಮನಸ್ಸಿನ ಹೊಸದಾಗುವಿಕೆಯ ವೈಯಕ್ತಿಕ ಅನುಭವದ ಅವಶ್ಯಕತೆಯು ಇದೆ. 4:17-32ರಲ್ಲಿ, ಅವರು ಸರಿಯಾದ ಮಾರ್ಗದಲ್ಲಿ ನಡೆಯುವುದಕ್ಕೆ ಹೇಗೆ ತಿರುಗಬೇಕೆಂಬ ನಿರ್ಧಿಷ್ಟ ಸೂಚನೆಯನ್ನು ಪೌಲನು ಅವರಿಗೆ ಕೊಡುವವನಾಗಿದ್ದಾನೆ.

## "ಕತ್ತಲೆಯಿಂದ ಬೆಳಕಿನಡೆ ತಿರುಗಿರಿ" (4:17-19)

**17ಆದದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೇನೆ. 18ಅವರು ನಿಷ್ಪ್ರಯೋಜನವಾದ ಬದ್ಧಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ; ಅವರ ಮನಸ್ಸು ಮೊಬ್ಬಾಗಿ ಹೋಗಿದೆ, ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ. 19ಅವರು ತಮ್ಮ ದುಸ್ಥಿತಿಗಾಗಿ ಸ್ವಲ್ಪವೂ ಚಿಂತಿಸದೆ ತಮ್ಮನ್ನು ಬಂಡುತನಕ್ಕೆ ಒಪ್ಪಿಸಿಕೊಟ್ಟು ಎಲ್ಲಾ ವಿಧವಾದ ಅಶುದ್ಧಕೃತ್ಯಗಳನ್ನು ಅತ್ಯಾಶೆಯಿಂದ ನಡಿಸುವವರಾಗಿದ್ದಾರೆ.**

**ವಚನ 17.** ಪೌಲನು ತಾನು ಪ್ರಾರಂಭಿಸುತ್ತಿದ್ದಂತೆಯೇ ತಾನು ಕೊಡಲಿರುವ ನಿಯೋಗದ ಹಿಂದಿರುವ ಮಹತ್ವವನ್ನು, ಅವಸರವನ್ನು ಮತ್ತು ಅಧಿಕಾರವನ್ನು ಒತ್ತಿ ಹೇಳುತ್ತಾನೆ. **ಆದದರಿಂದ ... ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೇನೆ** ಇದು ಹಿಂದೆ 4:1ರಲ್ಲಿನ ಯೋಗ್ಯವಾಗಿ ನಡೆದುಕೊಳ್ಳುವಿಕೆಯ ವಿಚಾರವಾಗಿ, ಉಪದೇಶ ವನ್ನು ಸೂಚಿಸುವುದಾಗಿದ್ದು, ಮತ್ತು ಪೌಲನು ದೇವರಿಗೋಸ್ಕರ ಮಾತನಾಡುತ್ತಾನೆ ಮತ್ತು ಬರೆದನು ಎಂಬುದನ್ನು ತೋರಿಸುವುದಾಗಿದೆ. ಆತನು ಆ ಕ್ಷಣದಲ್ಲಿ ಅವನು ತನ್ನ ಸ್ವಂತ ಬೋಧನೆಗಳನ್ನು ಬೋಧಿಸುತ್ತಿದ್ದಾನೆ ಎಂದು ಆತನು ಯೋಚಿಸಲಿಲ್ಲ; ದೇವರು ಆತನಿಗೆ ತನ್ನ ಆತ್ಮದ ಮೂಲಕ ಈ ಬೋಧನೆಗಳನ್ನು ತನಗೆ ಪ್ರಕಟಿಸಿದ್ದಾನೆ ಎಂದು ಆತನು ನಂಬಿದನು (1 ಕೊರಿಂಥ 2:10). "ಖಂಡಿತವಾಗಿ ಹೇಳು" ಎಂಬ ಪದವು (*marturomai*), ಸಾಕ್ಷಿಯಾಗಿ ಕರೆಕಳುಹಿಸುವ ವಿಚಾರವನ್ನು ಹೊಂದಿದ್ದು, ಪೌಲನು ಈ ಸೂಚನೆಗಳನ್ನು ಕರ್ತನನ್ನು ತನ್ನ ಸಾಕ್ಷಿಯಂತೆ ಕರೆಯುತ್ತಿದ್ದಾನೆ. ತಾನು "ಮನುಷ್ಯ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನು ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ" ಮಾತನಾಡುವುದಾಗಿ ಘೋಷಿಸುವವನಾಗಿದ್ದಾನೆ (1 ಕೊರಿಂಥ 2:13). ಆತ್ಮೀಕ ಜನರು ತನ್ನ ಬರಹಗಳನ್ನು "ಕರ್ತನ ಆಜ್ಞೆ"ಯೆಂಬಂತೆ ಗುರುತಿಸುವರು ಎಂದು ಪೌಲನು ಹೇಳುತ್ತಾನೆ. ಇದರ ಫಲವಾಗಿ ಪೌಲನು "ನಾನು ನಿಮಗೆ ಬರೆದಿರುವ ಸಂಗತಿಗಳು ಕರ್ತನ ವಿಧಿಯೇ ಎಂದು ಚೆನ್ನಾಗಿ ತಿಳುಕೊಳ್ಳಿರಿ" ಎಂದು ಹೇಳುತ್ತಿದ್ದಾನೆ (1 ಕೊರಿಂಥ 14:37).

ಪೌಲನು **ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ**

**ನಡೆದುಕೊಳ್ಳಬಾರದೆಂದು** ಎಫೆಸದವರಿಗೆ ಆಜ್ಞಾಪಿಸುವವನಾಗಿದ್ದಾನೆ. "ನಡೆ" (*peripateō*) ಎಂಬ ಪದವು 2:2 ಮತ್ತು 4:1ರಲ್ಲಿ ಬಳಿಕೆಯಾದ ಅದೇ ಕ್ರಿಯಾಪದವಾಗಿದೆ. "ಅನ್ಯಜನರು" ಎಂಬುದು ದೇವರನ್ನು ಬಿಟ್ಟು ನಡೆಯುವ ಅಥವಾ ಜೀವನ ಶೈಲಿಹೊಂದಿದ ಇಂಥವರನ್ನು, ಎಫೆಸದ ಕ್ರೈಸ್ತರಿಗೆ ವ್ಯತ್ಯಾಸವಾಗಿ ಸೂಚಿಸುವುದಾಗಿದೆ. ಕ್ರಿಸ್ತನಲ್ಲಿಯ ವಿಶ್ವಾಸಿಗಳು, ತಮ್ಮ ಕರೆ ಯುವಿಕೆಯಲ್ಲಿ ಯೋಗ್ಯರಾಗಿ ನಡೆದಿದ್ದಾದರೆ, ತಮ್ಮ ಸಮಾಜದಲ್ಲಿ ಸಂಪೂರ್ಣವಾಗಿ ಭಿನ್ನವಾದ ಜೀವನಶೈಲಿಯನ್ನು ಎದುರುನೋಡುವವರಾಗಿರುತ್ತಾರೆ. ಅನ್ಯಜನರು ಕ್ರಿಸ್ತನಲ್ಲಿ ಪ್ರವೇಶಿಸಿದಾಗ, ಅವರು ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುತ್ತಾರೆ. (ಅಧ್ಯಾಯ 2 ಅನ್ಯಜನರ ಹಿಂದಿನ ವ್ಯವಹಾರಗಳ ಜೊತೆಗೆ ಪರಿವರ್ತಿತವಾದ ನಂತರ ಅವರಿಂದ ಅಪೇಕ್ಷಿಸಲ್ಪಡುವದರ ವ್ಯತ್ಯಾಸವನ್ನು ಹೊಂದಿದೆ.) ಯೋಗ್ಯವಾಗಿ ನಡೆಯುವುದನ್ನು ಅಭ್ಯಾಸಮಾಡುವ ಯೆಹೂದ್ಯರು ಅಥವಾ ಅನ್ಯಜನಾಂಗದ ಕ್ರೈಸ್ತರಿಗಾಗಿ, ಅವರಿಗೆ ಪೌಲನು ಈ ವೇದಭಾಗದಲ್ಲಿ ಕೊಡುವಂಥ ನಿರಂತರವಾದ ಪ್ರೋತ್ಸಾಹ ಮತ್ತು ಉಪದೇಶದ ಅವಶ್ಯಕತೆಯು ಇದೆ. ಎಫೆಸದಲ್ಲಿ ಮೂರು ಗುಂಪಿನ ಜನರು ಇದ್ದರು: ಅನ್ಯಜನಾಂಗದ ಯೆಹೂದ್ಯರು, ಪರಿವರ್ತಿತರಾಗದ ಅನ್ಯಜನರು, ಮತ್ತು ಯೆಹೂದ್ಯರು ಮತ್ತು ಅನ್ಯಜನಾಂಗದವರು ಇಬ್ಬರೂ ಬಲ್ಲಂತ "ದೇವರು ಶಿಲುಬೆಯ ಮೂಲಕ" ಕ್ರಿಸ್ತನ ಮರುಸಂಧಾನದ ಪ್ರಕಾರ "ಒಂದೇ ದೇಹದ" "ಒಬ್ಬ ನೂತನ ಮನುಷ್ಯ"ನಿಂದಾದ ಕ್ರೈಸ್ತರು (2:15, 16). ಪೌಲನು, "ಯೆಹೂದಿಗಳು" ಮತ್ತು "ಗ್ರೀಕರು" ಮತ್ತು "ಸಭೆಯ" ದೇವರು ಎಂದು ಮಾತನಾಡುವಾಗ ಈ ಗುಂಪನ್ನು 1 ಕೊರಿಂಥ 10:32ರಲ್ಲಿ ಸೂಚಿಸಿದ್ದಾನೆ.

**ವಚನ 18. ನಿಷ್ಪ್ರಯೋಜನವಾದ** [ಅನ್ಯಜನರು] **ಬುದ್ಧಿಯುಳ್ಳವರಾಗಿ** ಎಂಬುದು ಮೂರು ವಿಚಾರಗಳನ್ನು ಒಳಗೊಂಡಿದೆ. (1) ತನ್ನ ಓದುಗರ ಹಿಂದಿನ ಜೀವಿತ ಮತ್ತು ಕ್ರಿಸ್ತನಲ್ಲಿಯ ಅವರ ಹೊಸ ಜೀವಿತದ ಮಧ್ಯದ ನಿಶ್ಚಿತವಾದ ಭಿನ್ನತೆಯನ್ನು ಪೌಲನು ತೋರಿಸುತ್ತಿದ್ದಾನೆ. ಅನ್ಯಜನರ ಜೀವಿತದಲ್ಲಿ ಖಂಡಿಸಬಹುದಾದಂಥದ್ದು ಯಾವದೂ ಅಲ್ಲಿ ಇಲ್ಲ ಎಂದು ಆತನು ಹೇಳುತ್ತಿದ್ದಾನೆಯೇ? ಇಲ್ಲಾ. ಆದರೆ ಆತನು ಕ್ರಿಸ್ತನಿಲ್ಲದ ಕತ್ತಲೆಯ ಜೀವಿತವನ್ನು ಆತನು ದೃಷ್ಟಾಂತೀಕರಿಸುತ್ತಿದ್ದಾನೆ. (2) ಅವರು ಕ್ರಿಸ್ತನಲ್ಲಿ ಕಂಡುಕೊಂಡ ಹೊಸಮಾರ್ಗದ ಪ್ರಕಾರ ಜೀವಿಸುವಂತೆ ಈ ಕ್ರೈಸ್ತರಿಗೆ ಪೌಲನು ಬೋಧನೆಯನ್ನು ಮಾಡುತ್ತಿದ್ದಾನೆ. "ಆಗ" ಮತ್ತು "ಈಗಿನ" ಅವರ ಜೀವಿತದ ರೀತಿಯ ಮಧ್ಯದ ದೊಡ್ಡ ವ್ಯತ್ಯಾಸವು ಎಂದರೆ ಆತನ ಬೋಧನೆಯು ಅವರ ಸಮುದಾಯದ ಮೇಲೆ ಹೆಚ್ಚು ಪ್ರಭಾವಶಾಲಿಯಾಗಿದ್ದೇ ಆಗಿದೆ. (3) ಈ ಅಪೊಸ್ತಲನು ಆಲೋಚನೆಯ ರೀತಿಯಿಂದ ಪ್ರಾರಂಭಿಸಿದನು ಮತ್ತು ಕಾರ್ಯದ ಬಗ್ಗೆ ಮಾತನಾಡಿದನು ಯಾಕೆಂದರೆ ಒಬ್ಬ ಮನುಷ್ಯನು ಮೊದಲು ಯೋಚಿಸುತ್ತಾನೆ ಮತ್ತು ಆ ಆಲೋಚನೆಗಳು ಕಾರ್ಯದತ್ತ ನಡೆಸುವವು ಆಗಿವೆ.

"ನಿಷ್ಪ್ರಯೋಜನ" (*mataiotēs*) ಎಂಬುದು ಖಾಲಿಯಾದಂಥದ್ದು ಅಥವಾ ಉದ್ದೇಶರಹಿತವಾದಂಥದ್ದು ಎಂದು ಸೂಚಿಸುವುದಾಗಿದೆ. "ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ" ಎಂಬುದು ಮೂರ್ಖತನದ ತರ್ಕ ಮತ್ತು ಅಲ್ಪತನದ ಮನಸ್ಸು ಎಂಬುದನ್ನು ಒಳಗೊಂಡಿರುವುದಾಗಿದೆ (ನೋಡಿರಿ ರೋಮಾಪುರ 1:21, 28). ಈ ಅನ್ಯಜನರಿಗೆ ಇಂಥ ವಿಚಾರಗಳು ಕೊಡಲ್ಪಟ್ಟಿವೆ. "ಹೀಗಾಗಿ, ದೇವರಿಗೆ ಸರಿಯಾದ ಸಂಬಂಧದ ಕೊರತೆಯ ಕಾರಣದಿಂದ, ಅನ್ಯಜನರ ಯೋಚನೆಯ ಅಪಾಯಕರವಾದ ಕುಂದಿನಿಂದ ತೊಂದರೆಗೆ ಒಳಗಾಗಿದೆ. ಇದು ನೈಜತ್ವದ ಮೇಲಿನ ಪ್ರಭುತ್ವವನ್ನು ಕಳೆದುಕೊಂಡಿದೆ ಮತ್ತು ಮೂರ್ಖತನದಿಂದ ಸುಳಿಗೆ ಮಾಡುವವದರಲ್ಲಿ ಬಿದ್ದುಕೊಂಡಿದೆ."[1]

ಅನ್ಯಜನರ ಮಾನಸ್ತಿಕ ಸ್ಥಿತಿಯ ಬಗೆಗಿನ ವಿವರಣೆಯು ಮುಂದುವರೆಯಿತು. **ಅವರ ಮನಸ್ಸು ಮೊಬ್ಬಾಗಿ ಹೋಗಿದೆ** ಎಂಬುದು "ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ" ಎಂಬುದರ ಮೇಲಿನ ವ್ಯಾಖ್ಯಾನವಾಗಿದೆ. ದೇವರು ಒದಗಿಸುವ ಬೆಳಕು ಒತ್ತಲ್ಪಟ್ಟಿತ್ತು ಮತ್ತು

ತಿರಸ್ಕೃತವಾದ ಕಾರಣ ಅನ್ಯಜನರ ಯೋಚನೆಯ ಮುರ್ಖತೆಯು ಹೊರಗೆ ಬಂತು. ಅಪನಂಬಿಗಸ್ತರಾದ ಅನ್ಯಜನರು ಮತ್ತು ಕ್ರೈಸ್ತರು ಮಧ್ಯದ ವ್ಯತ್ಯಾಸವು ಬಲು ನಿಶ್ಚಿತವಾದದ್ದಾಗಿತ್ತು; ಈ ವಿಶ್ವಾಸಿಗಳು ದೇವರ ಸತ್ಯಕ್ಕೆ ವಿಧೇಯರಾದವರೂ ಮತ್ತು "ಮನೋನೇತ್ರ ಬೆಳಗಿಸುವ ..." ತಮ್ಮ "ಕಣ್ಣಾಗಿದ್ದವರೂ ಆಗಿದ್ದರು." ಅನ್ಯಜನರ ಅರಿತುಕೊಳ್ಳುವಿಕೆಯ ಕಣ್ಣುಗಳು ಆಲೋಚನಾ ಪೂರ್ವಕವಾಗಿ ಕಪ್ಪಾಗಿರುವುದರಿಂದ, ಅವರು ಸತ್ಯದ ಮತ್ತು ಬೆಳಕಿನ ಮೂಲದಿಂದ **ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ.** ಅವರು ದೇವರಿಂದ ವಿಮುಖವಾಗಿರುವುದರಿಂದ, ಅವರು ಆತ್ಮೀಕ ಜೀವಿತವು ಇಲ್ಲವಾಗಿದೆ. ಅವರು "ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದಾರೆ" (2:1) ಮತ್ತು ತಮ್ಮ ಪಾಪಗಳ ಸಂಬಳವಾಗಿ ನಿತ್ಯಮರಣವನ್ನು ಮಾತ್ರ ಎದುರುನೋಡುವವರಾಗಿದ್ದಾರೆ (ರೋಮಾಪುರ 6:23). ಅವರ ಬೆಳಕಿನ ತಿರಸ್ಕರಿಸುವಿಕೆಯು ಜೀವಿತದ ತಿರಸ್ಕರಿಸುವುಕೆಯು ಆಗಿದೆ.

ದೇವರ ಜೀವಿತದಿಂದ ಅನ್ಯಜನರ ಬಹಿಷ್ಕರಿಸುವಿಕೆಯು "ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ." ಅವರ ಜ್ಞಾನದ ಕೊರತೆಯು ಸ್ವಭಾವದಲ್ಲಿನ ಶಿಷ್ಟಾಚಾರದ ಕಾರಣದಿಂದ ಅವರು ಅವರಿಗೆ ಕೊಡಲ್ಪಟ್ಟ ದೇವರ ಬೆಳಕನ್ನು ತಿರಸ್ಕರಿಸಿದರು (ನೋಡಿರಿ ರೋಮಾಪುರ 1:18-23). **ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ** ಅಜ್ಞಾನಿಗಳು ಆಗಿದ್ದರು. "ದೇವರು ಅರಿಯದೆ ಇರಲು ಮತ್ತು ಆತನು ಕೊಟ್ಟ ಬೆಳಕು ಮತ್ತು ಜೀವಿತದ ವಿರುದ್ಧ ಶಿಷ್ಟಚಾರದಿಂದ ತಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳುವುದನ್ನು ಅವರು ಆಯ್ಕೆಮಾಡಿಕೊಂಡಿದ್ದರು." "ಕಠಿಣತೆ" ಇದು (*pōrōsis*) ಭಾಷಾಂತರವಾಗಿದೆ ಮತ್ತು ಹೊಸ ಒಡಂಬಡಿಕೆಯಲ್ಲಿ ರೂಪತ್ಮಕವಾಗಿ ಬಳಸಲ್ಪಟ್ಟಂತಹ "ನಿಷ್ಪ್ರಯೋಜಕ ಅಥವಾ ಕುರುಡುತನ" ಎಂಬುದಾಗಿದೆ.[2] ವಚನ 18ರಲ್ಲಿ ಮತ್ತು ಹೊಸ ಒಡಂಬಡಿಕೆಯ ಇನ್ನೂ ಇತರ ಎರಡು ಕಡೆಗಳಲ್ಲಿ ಇದು ಕಂಡುಬಂದಿದೆ (ಮಾರ್ಕ 3:5; ರೋಮಾಪುರ 11:25), ಇದು "ಮಾನಸಿಕ ಅಥವಾ ನೈತಿಕ ಕಠಿಣತೆ" ಎಂಬಂತೆ ಬಳಸಲ್ಪಟ್ಟಿದೆ.[3] "ಹೃದಯ" (*kardia*), ಎಂಬುದು ಭಾಷಾಂತರವಾಗಿದ್ದು, "ದೈಹಿಕ, ಮತ್ತು ಆತ್ಮೀಕ, ಮತ್ತು ಮಾನಸಿಕ ಜೀವಿತದ ಸ್ಥಳ" ಎಂಬರ್ಥವನ್ನು ಕೊಡುವುದಾಗಿದೆ.[4] ತನ್ನ ಹೃದಯದಲ್ಲಿ ಸ್ವೇಚ್ಚೆಯಿಂದ ಕಠಿಣವಾದ ಒಬ್ಬನು ದೇವರ ಬಗ್ಗೆ ಅರಿವಿಲ್ಲದವನೂ, ನಿರ್ಲಕ್ಷವುಳ್ಳವನೂ, ಮತ್ತು ಆತ್ಮೀಕ ಕತ್ತಲೆಯಲ್ಲಿ ಕಾಣಿಸುವನೂ ಆಗಿರುತ್ತಾನೆ.

**ವಚನ 19.** ರೋಮಾಪುರ 1ರಲ್ಲಿರುವಂತೆ, ಇಲ್ಲಿ ವಿವರಿಸಿರಿಸಲ್ಪಟ್ಟಂಥ ಜನರು ತಮಗೆ ಕೊಟ್ಟಂಥ ಬೆಳಕನ್ನು ನಿರಾಕರಿಸದವರು ಆಗಿದ್ದಾರೆ; ಅವರ ಹೃದಯವು ಕಠಿಣವಾಗಿದೆ, ಮತ್ತು ಇನ್ನೂ ದುಷ್ಟರಾಗುತ್ತಿದ್ದಾರೆ. **ಅವರು** ಎಂಬುದು ಕೊರಗಿಸುವುದರಲ್ಲಿ ಇದ್ದಂಥ ನಿಶ್ಚಿತ ಸಂದರ್ಭಗಳಲ್ಲಿನ ಅವರ ಕಠಿಣತೆಯು ಹಿಂದೆ ಸೂಚಿಸಲ್ಪಟ್ಟಂಥ ವ್ಯಕ್ತಿಗಳಿಗೆ ಸಂಬಂಧಿಸಿದ್ದು ಆಗಿದೆ. **ಅವರು ತಮ್ಮ ದುಃಸ್ಥಿತಿಗಾಗಿ** ಎಂಬುದು *apēlgēkotes*ದ ಭಾಷಾಂತರವಾಗಿದೆ ಮತ್ತು "ನೋವು ಅಥವಾ ದುಃಖವನ್ನು ಭಾವನರಹಿತವಾಗುವಂತೆ ... ಮುದ್ರೆಹಾಕುವದು" ಎಂಬರ್ಥವನ್ನು ಕೊಡುವುದಾಗಿದೆ.[5] ಸಾಮರ್ಥ್ಯವನ್ನು ಮೀರಿದ ವೇದನೆಯ ಮನಸಾಕ್ಷಿಯು ಅನುಭವವು, ಈ ಅನ್ಯಜನರು ತಮ್ಮನ್ನು ತಾವು **ಒಪ್ಪಿಸಿಕೊಟ್ಟಿದ್ದಾರೆ** (*paredōkan*); ಅದು ಅವರು ತಮ್ಮನ್ನು ತಾವು ಪಾಪಮಯ ಜೀವಿತದ ರೀತಿಗೆ ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದಾರೆ ಎಂದಾಗಿದೆ. ಅವರು **ಎಲ್ಲಾ ವಿಧವಾದ ಅಶುದ್ಧಕೃತ್ಯಗಳನ್ನು ಅತ್ಯಾಶೆಯಿಂದ ನಡಿಸುವವರಾಗಿದ್ದಾರೆ** ಎಂದು ವೇಧಭಾಗವು ಹೇಳುವುದಾಗಿದೆ. ಇದು ಕೇವಲ ಅನ್ಯಜನರಿಂದ ಮಾಡಲ್ಪಟ್ಟದ್ದು ಆಗಿದೆ ಎಂದಲ್ಲ, ಆದರೆ ಕೆಲವು ಸಾರಿ ಅವರು ಆಯಲ್ಪಟ್ಟವರೂ ಇದೇ ರೀತಿ ಮಾಡುವವರಾಗಿದ್ದಾರೆ.

ಅನ್ಯಜನರ ಆಯ್ಕೆಯನ್ನು ಮೂರು ಪದಗಳು ವರ್ಣಿಸುತ್ತವೆ: "ಬಡತನ," "ಅಶುದ್ಧ ಕೃತ್ಯಗಳು" ಮತ್ತು "ಅತ್ಯಾಶೆ." "ಬಡತನ" (*aselgeia*) ಎಂಬುದರ ಅರ್ಥವು "ಹೇಯವಾದ

ಬಡತನ" ಎಂದಾಗಿದೆ; "ಅಶುದ್ಧ ಕೃತ್ಯಗಳು" (*akatharsia*) "ವಿಶಾಲಾರ್ಥದಲ್ಲಿ ನೈತಿಕ ಪರಿಶುದ್ಧತೆ" ಎಂಬುದನ್ನು ಒಳಗೊಂಡಿದೆ; ಮತ್ತು "ಅತ್ಯಾಶೆ" (*pleonexia*) ಎಂಬುದು "ಹಿಡಿತವಿಲ್ಲದ ಅತ್ಯಾಶೆಯ ಇಚ್ಛೇಗಳು"ಎಂಬರ್ಥವನ್ನು ಕೊಡುವವು ಆಗಿವೆ.[6] ಅನ್ಯಜನರ ಆಯ್ಕೆಯ ಕಾರಣದಿಂದ, ದೇವರು ಅವರ ದೇವರಿಲ್ಲದ ನಡತೆಯ ಮೇಲೆ ದೇವರು ಅವರನ್ನು ಬಿಡುವವನಾಗಿದ್ದಾನೆ (ನೋಡಿರಿ ರೋಮಾಪುರ 1:24, 26, 28).

## ಹಳೆಯತನವನ್ನು ಬಿಟ್ಟುಬಿಡಿರಿ ಹೊಸದಾಗಿರುವತ್ತ ತಿರುಗಿರಿ (4:20-24)

### "ಹಳೆಯತನವನ್ನು ಬಿಟ್ಟುಬಿಡಿರಿ" (4:20-22)

**20ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ. 21ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. 22ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದೆಂದರೆ - ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂಥದ್ದು.**

**ವಚನಗಳು 20-22.** ಪೌಲನು ಅವರ ಇಂದಿನ ಜೀವಿತವನ್ನು ಮತ್ತು ಹಿಂದಿನ ಜೀವಿತಕ್ಕೆ ವ್ಯತ್ಯಾಸ ಮಾಡುವ ಮೂಲಕ ಪ್ರಾರಂಭಿಸುವವನಾಗಿದ್ದಾನೆ. **ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ** ಎಂದು ಆತನು ಹೇಳುತ್ತಾನೆ. "ಆದರೆ ನಿಮಗೆ ಕ್ರಿಸ್ತನ ಬಗೆಗೆ ಕಲಿಸುವಾಗ ನೀವು ಕಲಿಯದಿರುವುದೇ" ಎಂದು NLT ಹೇಳುತ್ತದೆ.

ಪೌಲನು ಈ ಭಾಗವನ್ನು 4:17ರಲ್ಲಿ "ಇನ್ನು ಮೇಲೆ ನಡೆದುಕೊಳ್ಳಬಾರದೆಂದು" ಹೇಳುವ ಮೂಲಕ ಪ್ರಾರಂಭಿಸುತ್ತಾನ. "ಆದುದರಿಂದ ... ನೀವು ... ನಡೆದುಕೊಳ್ಳಬಾರದೆಂದು" ಎಂಬುದರ ಅಕ್ಷರಸಹ ಭಾಷಾಂತರವು "ಆದರೆ ನೀವೆಲ್ಲಾ" ಎಂದಾಗಿರಬಹುದು. ಪೌಲನ ಮಾತುಗಳು ನಿಶ್ಚಿತವಾಗಿ "ನೀವು" ಎಂಬುದರ ಜೊತೆ "ಅನ್ಯಜನರು" ಎಂದು ವ್ಯತ್ಯಾಸವಾದಂತಿವೆ (4:17). "ಕಲಿ" ಎಂಬ ಕ್ರಿಯಾಪದವು ಭೂತಕಾಲದಲ್ಲಿ ಇದ್ದು, ಎಫೆಸದ ರೂಪಾಂತರವನ್ನು ಸೂಚಿಸುವುದಾಗಿದೆ ಎಂಬುದರಲ್ಲಿ ಯಾವ ಸಂಶಯವಿಲ್ಲ. "ಕ್ರಿಸ್ತನ ಕಲಿಯುವಿಕೆಯು" ಅಕ್ಷರಸಹ, "ಕ್ರಿಸ್ತನನ್ನು ಕಲಿಯುವುದಾಗಿದೆ." ಫಿಲಿಪ್ಪಿ 3:10ರಲ್ಲಿ, "ಆತನನ್ನು ಅರಿಯುವದು" ಪೌಲನು ತನ್ನ ಆಶೆಯನ್ನು ವ್ಯಕ್ತಪಡಿಸುವವನಾಗಿದ್ದಾನೆ. ಮತ್ತು ಕೊಲೊಸ್ಸೆ 2:6ರಲ್ಲಿ "ಕ್ರಿಸ್ತಯೇಸುವನ್ನು ಕರ್ತನೆಂದು ಸ್ವೀಕರಿಸುವವರ" ಬಗ್ಗೆ ಮಾತನಾಡುವವನಾಗಿದ್ದಾನೆ. ಈ ವೇದಭಾಗದಲ್ಲಿ ಹೆಚ್ಚಾಗಿ ಒಳಗೊಂಡಿರುವದು - ಎಫೆಸ 4:17-32ನ್ನು ಒಳಗೊಂಡು - ಕ್ರಿಸ್ತನ ಬಗೆಗೆ ತಿಳಿದುಕೊಳ್ಳುವದು ಅಥವಾ ಕ್ರಿಸ್ತನ ತತ್ವದ ಬಗೆಗೆ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಿನದು ಮಾತ್ರ ಆಗಿದೆ. ಈ ವೇದಭಾಗದಲ್ಲಿ ಕ್ರಿಸ್ತನು ವೈಯಕ್ತಿಯ ವಿಷಯ ಆಗಿದ್ದಾನೆ; ಆತನು ಬೋಧಿಸಿದಂಥವನು, ಸ್ವೀಕರಿಸದಂಥವನೂ, ಬಲ್ಲಂತವನು, ಮತ್ತು ಎಫೆಸದವರು ತಿಳಿದಂಥವನೂ ಆಗಿದ್ದನು.

ಪೌಲನು ತನ್ನ ಉಪದೇಶವನ್ನು ವಿವರಿಸುತ್ತಾನೆ: **ನೀವಾದರೋ ... ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು.** "ನೀವಾದರೋ" (ವಾಸ್ತವವಾಗಿ) ಇದು ಗ್ರೀಕ್‌ದಲ್ಲಿ ಎರಡು ಅವ್ಯಯಗಳಲ್ಲಿ, *ēi* ("if") ಮತ್ತು *gē* ("ವಾಸ್ತವವಾಗಿ, ಅದನು ನೋಡುತ್ತಾ") ಭಾಷಾಂತರವಾಗಿದೆ. "ಸರಿಯಾಗಿ ವಹಿಸಲ್ಪಟ್ಟದ್ದು ಎಂದು ನಂಬುವಂಥ ಒಂದು ಸಂಗತಿ" ಎಂದು ಸೂಚಿಸಲ್ಪಟ್ಟ ಪದಗಳನ್ನು ಜೊತೆಯಾಗಿ ಸೇರಿಸುವುದು ಆಗಿದೆ.[7] ಪೌಲನು ತಾನು ಏನನ್ನು ಹೇಳುತ್ತಿದ್ದಾನೆ ಅದರ ಬಗ್ಗೆ ಪ್ರಶ್ನಿಸುತ್ತಿಲ್ಲ ಅಥವಾ ಸಂಶಯಿಸುತ್ತಿಲ್ಲ, ಆದರೆ ದೃಢವಾದ ಮತ್ತು ಸರಿಯಾದ

ಕಲ್ಪನೆಯನ್ನು ಮಾಡುತ್ತಿದ್ದಾನೆ.

"ಆತನ ಬಗ್ಗೆ ಕೇಳಿದ್ದೀರಿ" ಎಂದು ಹೇಳುವಾಗ ಪೌಲನು ಎಫೆಸದವರು ಆರಂಭದಲ್ಲಿ ಸುವಾರ್ತೆಯನ್ನು ಕೇಳಿದ್ದರ ಬಗ್ಗೆ ಸೂಚಿಸುತ್ತಿದ್ದಾನೆ (ನೋಡಿರಿ 1:13). ಅವರು ಅಪೊಸ್ತಲರಾದ ಪೌಲನಿಂದ ಘೋಷಿಸಲ್ಪಟ್ಟ ಸತ್ಯದ ವಾಕ್ಯಗಳನ್ನು ಆತನ ಸಂದೇಶದ ಮೂಲಕ "ಆತನನ್ನು ಕೇಳಿದ್ದಾರೆ" (ನೋಡಿರಿ ಕೊಲೊಸ್ಸೆ 1:5; ಅಪೊಸ್ತಲರ ಕೃತ್ಯಗಳು 19:1-10).

> ಕ್ರಿಸ್ತನನ್ನು ಕೇಳುವ ವಿಷಯದಲ್ಲಿ ಗ್ರೀಕ್ ವೇಭಾಗವು ಕ್ರಿಸ್ತನಿಗೆ ಎಂಬಂತೆ ದ್ವಿತೀಯ ವಿಭಕ್ತಿಯ ಜೊತೆ "ಕೇಳು" ... ಎಂಬುದು ಸರ್ವನಾಮವಾಗಿದೆ. [ಈ ಪದದ] ಜೊತೆ ಯಾರ ಮಾತುಗಳು ಕೇಳಲ್ಪಡುತ್ತಯೋ ಆ ವ್ಯಕ್ತಿಯು ಪ್ರಭುತ್ವದೆಡೆಗೆ ನಿಲ್ಲುವುದಾಗಿದ್ದು, ಕೇಳುವಂತವನು ವ್ಯಕ್ತಿಯ ದ್ವಿತೀಯ ವಿಭಕ್ತಿಯಲ್ಲಿ ಇರುವವನಾಗಿದ್ದಾನೆ ಹೀಗೆ ಕ್ರಿಸ್ತನ ಬಗೆಗೆ ಕೇಳುವದು ಕ್ರಿಸ್ತನ ಬಗೆಗೆ ಘೋಷಿತವಾದದ್ದನ್ನು ಪಡೆಯುವುದರ ಕೊನೆ ಎಂದಾಗಿದೆ.[8]

ಎಫೆಸದವರು ಕ್ರಿಸ್ತನ ಬಗ್ಗೆ ಮತ್ತು ಆತನ ಮಾರ್ಗಗಳ ಬಗ್ಗೆ ಕೇಳಿದ್ದರು (4:20). ಈ ಆರಂಭಿಕ ಬೋಧನೆಯನ್ನು ಅನುಸರಿಸಿ, ಅವರು ಕ್ರಿಸ್ತನಲ್ಲಿ ದೀಕ್ಷಾಸ್ನಾನವನ್ನು ಹೊಂದಿದರು. "ಆತನನ್ನೇ ಕೇಳಿದಿರಲ್ಲಾ" ಎಂಬುದು ತಮ್ಮನ್ನು ಕ್ರೈಸ್ತರನ್ನಾಗಿಸಲು ಉತ್ತೇಜಿಸಿದ ಆರಂಭಿಕ ಸುವಾರ್ತೆಯನ್ನು ಕೇಳಿದ *ನಂತರ* ಅವರು ಸ್ವಿಕರಿಸಿದ ಬೋಧನೆಯನ್ನು ಸೂಚಿಸುವುದಾಗಿದೆ. ಅವರು ಮುಂದೆ ತಮ್ಮ ಪರಿವರ್ತನೆಯ ನಂತರ "ಆತನಲ್ಲಿ" ಬೋಧಿ ಸಲ್ಪಡುವದು, "ಆತನಲ್ಲಿ" ಆತ್ಮೀಕ ವೃದ್ಧಿಯು ಅವರಲ್ಲಿ ಪರಿಣಾಮಗೊಂಡಿತು.

"ಯೇಸುವಿನಲ್ಲಿರುವ ಸಂತ್ಯೋಪದೇಶವು" ಎಂಬುದು ಯೇಸುವು ಸತ್ಯದ ಸಾಕಾರನಾಗಿದ್ದಾನೆ ಎಬುದನ್ನು ನೆನಪಿಸುವುದಾಗಿದೆ (ನೋಡಿರಿ ಯೋಹಾನ 14:6). ಯೇಸುವಿನ ಬಗೆಗಿನ ಸತ್ಯವು ಎಫೆಸದವರು ಕೇಳಿದ ಮತ್ತು ಸ್ವೀಕರಿಸಿದ ಹಾಗೂ ಅನ್ಯಜನರ ಹಾಗೆ ಜೀವಿಸಬಾರದೆಂದು "ಆತನಲ್ಲಿ ಅವರು ಕಲಿಸಲ್ಪಟ್ಟ ಸತ್ಯವು ಆಗಿತ್ತು, ಆದರೆ ಹೊಸ ಜೀವಿತವನ್ನು ಜೀವಿಸುವುದನ್ನು ಅವರು ಕ್ರಿಸ್ತನಲ್ಲಿ ಕಂಡುಕೊಂಡರು."

ಮೂರು ಕಾರ್ಯಗಳು ವಚನ 22ರಿಂದ ವಚನ 24ರವರೆಗೆ ಸೂಚಿತವಾಗಿವೆ. ಎಫೆಸದವರು ಏನು ಮಾಡಬೇಕೆಂದು ಕಲಿಸಲ್ಪಟ್ಟಿದ್ದಾರೆ ಎಂದು ಅಪೊಸ್ತಲನು ವಿವರಿಸುತ್ತಾನೆಯೇ (4:21), ಅಥವಾ ಈ ಕಾರ್ಯಗಳು ಸಹೋದರರು ಕಲಿಸಲ್ಪಟ್ಟಂಥ ಪರಿಣಾಮಗಳು ಆಗಿವೆ? "ನೀವು ಕೇಳಿದಿರಲ್ಲಾ ... ಕಲಿಸಲ್ಪಟ್ಟಿರಲ್ಲಾ" ಮತ್ತು "ನೀವು ತೆಗೆದುಹಾಕಿಬಿಡಬೇಕು" ಎಂದು ಪೌಲನು ಹೇಳಿದ್ದರಿಂದ ಅವರು ಬಹುಶಃ ಅತ್ಯಗತ್ಯವಾಗಿರಲಿಲ್ಲ. ಇದರ ಅರ್ಥ ಯಾವುದು ಕಲಿಸಲ್ಪಟ್ಟಿದೆಯೋ ಸುವಾರ್ತೆಗೆ ಅವರ ವಿಧೇಯತೆಯ ಪರಿಣಾಮದೊಂದಿಗೆ ಅದರ ವಿವರಣೆಯನ್ನು ಪೌಲನು ಕೊಡುತ್ತಿದ್ದಾನೆ. ಇನ್ನೊಂದು ಮಾತಿನಲ್ಲಿ, ಅವರು ಕೇಳಿದ್ದಾರೆ, ಅವರು ಕಲಿಸಲ್ಪಟ್ಟಿದ್ದಾರೆ ಮತ್ತು ತಾವು ಕ್ರೈಸ್ತರಾದಾಗ "ಪೂರ್ವಸ್ವಭಾವವನ್ನು" ತೆಗೆದುಹಾಕಿಬಿಡುವ ಮೂಲಕ ಬೋಧನೆಗೆ ಪ್ರತಿಕ್ರಯಿಸುವವರಾಗಿದ್ದಾರೆ.

ಮೊದಲ ಕಾರ್ಯವು ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು ಎಂಬುದಾಗಿದೆ. ಈ ಕೆಲಸವು ಸರಿಯಾಗಿ ಯಾವಾಗ ಮಾಡಬೇಕು ಎಂದು ಈ ವಚನವು ಸೂಚಿಸಿಲ್ಲ; ಹೇಗೋ, ರೋಮಾಪುರ 6:2-6 ಹೇಳುವಂತೆ, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದವರು ಆತನೊಂದಿಗೆ ಹೂಳಲ್ಪಡುತ್ತಾರೆ ಎಂದು ಹೇಳುತ್ತದೆ. ಈ ರೀತಿಯಲ್ಲಿ, ಒಬ್ಬ ವ್ಯಕ್ತಿಯು ಪಾಪಕ್ಕಾಗಿ ಸಾಯುತ್ತಾನೆ ಮತ್ತು ಹೊಸಜೀವಿತದಲ್ಲಿ ಎಬ್ಬಿಸಲ್ಪಡುತ್ತಾನೆ. ಮರಣಿಸಿದವರು ಮತ್ತು ಕ್ರಿಸ್ತನೊಂದಿಗೆ ಪುನರುತ್ಥಾನ ಹೊಂದಿದವರ ಬಗ್ಗೆ ಪೌಲನು ವಚನ 6ರಲ್ಲಿ ಹೀಗೆ ಹೇಳುತ್ತಾನೆ. "ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ." "ಪೂರ್ವಸ್ವಭಾವ ... ನೂತನಸ್ವಭಾವ" ಎಂಬ ಈ ಪರಿಚ್ಛೇದದರಲ್ಲಿರುವ

ವಿಷಯವು (4:20-24) ಸಹ ರೋಮಾಪುರ 6ನ್ನು ಪೌಲನು ಬರೆಯುವಾಗ ಆತನ ಮನದಲ್ಲಿ ಇತ್ತು. ಮುಂದೆ, ಯಾರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿರುವವರು "ಕ್ರಿಸ್ತನನ್ನು ಧರಿಸಿಕೊಂಡಿರುವವರಾಗಿ"ರುವ (ಗಲಾತ್ಯ 3:27) ವಾಸ್ತವವು "ನೂತನ ಜೀವಿತ"ವನ್ನು ಪ್ರಸ್ತಾಪಿಸುವುದಾಗಿದೆ ಎಂದು ಪೌಲನು ಖಂಡಿತವಾಗಿ ಹೇಳುತ್ತಾನೆ. ಆದ್ದರಿಂದ, 4:22ರಲ್ಲಿನ ಕಾರ್ಯಗೋಸ್ಕರ ವ್ಯಾಖ್ಯಾನಿತವಾದ ಸಮಯವು ಹಳೇಯದನ್ನು ತೆಗೆದುಹಾಕುವಾಗ ದೀಕ್ಷಾಸ್ನಾನದಲ್ಲಿ ಸಮಯದಲ್ಲಿ ಅದು ಕಂಡುಬರುವುದಾಗಿದೆ.

"ಪೂರ್ವಸ್ವಭಾವದ" ವಿಚಾರದಲ್ಲಿ "ಹಳೆಯದು" (*palaios*) ಎಂಬುದು "ತೆಗೆದುಹಾಕಿದ, ಶಿಥಿಲಗೊಂಡ, ಉಪಯೋಗವಿಲ್ಲದೆ"[9] "ಸ್ವಭಾವ" (*anthrōpos*) ಎಂದು ಸೂಚಿಸುವುದಾಗಿದೆ. "ಪೂರ್ವಸ್ವಭಾವವನ್ನು" ಬಿಟ್ಟುಬಿಡುವದು ಒಂದು ನಿಶ್ಚಿತ ದೋಷವನ್ನು ಎತ್ತಿಡುವದು ಸರಳವಾದದ್ದೇನಲ್ಲ, ಆದರೆ ಹಿಂದಿನ ಸಂಗತಿಯೊಡನೆ ಒಂದು ನಿರ್ಣಾಯಕ ತಡೆಯಾಗಿದೆ. ಬಿಟ್ಟುಬಿಡುವಂಥದ್ದು "ಸಂಪೂರ್ಣವಾದ ಹಳೆಯ ಮನುಷ್ಯನು ಪಾಪದಿಂದ ಆಳಲ್ಪಡುವ ಜೀವಿತದಿಂದ ನಡೆಸಲ್ಪಡುವುದೇ ಆಗಿದೆ."[10]

ಹಳೆಯ ಸ್ವಭಾವವು **ಅದು ಮೋಸಕರವಾದ ದುರಾಂಶೆಗಳಿಂದ ಕೆಟ್ಟುಹೋಗುವಂಥದ್ದು.** "ಕೆಟ್ಟುಹೋಗುವಂಥದ್ದು" ಎಂಬುದು ಒಂದು ವರ್ತಮಾನ ಕೃದಂತವಾಗಿದ್ದು ಹಳೆಯ ಸ್ವಭಾವವು ಕೆಟ್ಟದು ಮತ್ತು ಕೆಟ್ಟದರತ್ತ ನಡೆಯುವ ನಿರಂತರ ಪ್ರಕ್ರಿಯೆಯ ಬಗ್ಗೆ ಮಾತನಾಡುವುದಾಗಿದೆ. "ದುರಾಶೆ" ಎಂಬುದು *epithumia* ದಿಂದ ಭಾಷಾಂತರವಾಗಿದೆ ಮತ್ತು ಈ ಸಂದರ್ಭದಲ್ಲಿ "ಸಂಯಮಹೀನ ಆಶೆಯ ಹಪಾಹಪಿ" ಎಂಬ ಅರ್ಥವನ್ನು ಕೊಡುವುದಾಗಿದೆ.[11] ಅಲ್ಲಾದರಕವಾದ ಜೀವಿತದ ವಾಗ್ದಾನ ಕೋಡುವ ಈ ಕೆಟ್ಟ ಆಶೆಗಳು "ಮೋಸಕರವಾದವು" ಆಗಿವೆ ಆದರೆ ಮೋಸಕರವಾದ ಜೀವಿತದತ್ತ ನಡೆಸುವವು ಆಗಿವೆ. ಕೆಟ್ಟುಹೋಗುವಂಥದ್ದು ಅನ್ಯಜನರ ಮಾರ್ಗಗಳನ್ನು ಲಕ್ಷಕರಿಸುವುದಾಗಿದೆ (2:3). ವಿಶ್ವಾಸಿಗಳು ಸುವಾರ್ತೆಯ ಸತ್ಯಕ್ಕೆ ವಿರುದ್ಧವಾಗಿ ನಿಲ್ಲುವ ಈ ಜೀವನರೀತಿಯಿಂದ ಪ್ರತ್ಯೇಕರಾಗಿದ್ದಾರೆ (4:14, 15; 2 ಥೆಸಲೋನಿಕ 2:10). ಯಾವದು ನಿಜ ಮತ್ತು ಯಾವದು ಸುಳ್ಳು ಎಂಬುದರ ಮಧ್ಯ ಬೇರ್ಪಡಿಸದೆ ಇರುವವರನ್ನು ಸುಳ್ಳು ತತ್ವದಜೀವತವು ಮೋಸಗೊಳಿಸುವುದಾಗಿದೆ (ನೋಡಿರಿ ಕೊಲೊಸ್ಸೆ 2:8).

## "ಹೊಸದಾಗಿರು" (4:23)

**[23]ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ.**

**ವಚನ 23.** ಮೂರು ಕಾರ್ಯಗಳಲ್ಲಿ ಮೊದಲನೆಯದು, ಎಫೆಸದವರು ತಾವು ದೀಕ್ಷಾಸ್ನಾನ ಹೊಂದಿದಾಗ ಹಿಂದೆ ತಾವು ಮಾಡಿದ್ದನ್ನು "ಬಿಟ್ಟುಬಿಡುವದು" ಎಂದಾಗಿತ್ತು. ಎರಡನೆಯದು **ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ.** "ಹೊಸಬರಾಗಿ" (*ananeoō*) ಎಂಬುದು "ಅಂತರ್ಯದ ಸುಧಾರಣೆಯ ಮೂಲಕ ಹೊಸದಾಗುವುದು" ಆಗಿದೆ.[12] ಇಲ್ಲಿ ಸೂಚಿಸಲ್ಪಟ್ಟ ವ್ಯಾಕರಣಾತ್ಮಕ ರೀತಿಯು ಆ ಕಾರ್ಯವು ನಡೆಯುವಾಗ ಯಾವುದೇ ವಿಪಕ್ಷೆಯಿಲ್ಲದೆ "ನಿರಂತರವಾದ ... ಕಾರ್ಯವನ್ನು ಸೂಚಿಸುವುದಾಗಿದೆ, " ಮತ್ತು "ವಿಷಯವು ಆತನ ಮೇಲೆ ಅಥವಾ ಆತನಿಗೆ ಸಂಬಂಧಪಟ್ಟಂಥದ್ದನ್ನು" ತೋರಿಸುವಂಥದ್ದಾಗಿದೆ.[13] ಯಾವಾಗ ಕಾರ್ಯವು ದೀಕ್ಷಾಸ್ನಾನದ ಜೀವಿತದ ಉದ್ದಕ್ಕೂ ಇರುವುದಾಗಿದೆ.

ಪೌಲನು *ನೀವು* "ಅಂತರ್ಯ"ದಲ್ಲಿ ಎಂದು ಮಾತಮಾಡಿರುವುದರಿಂದ "ಅಂತರ್ಯ" ಎಂಬುದು ಇಲ್ಲಿ ಪರಿಶುದ್ಧಾತ್ಮನನ್ನು ಸೂಚಿಸುತ್ತಿಲ್ಲ (ವಿವರಣೆಯು ಸೇರ್ಪಡೆಯಾಗಿದೆ). "ಮನಸ್ಸು" (ಸ್ವಭಾವ) ಇದು ಆತನ ಸಾಮರ್ಥ್ಯದ ಕಾರಣ ಮತ್ತು ಅರಿತುಕೊಳ್ಳುವಿಕೆಯು

ಮನುಷ್ಯನಲ್ಲಿ ಮನೆಮಾಡಿದಂಥ ಜ್ಞಾನದ ಅಳತೆ ಆಗಿದ್ದು, "ನೈತಿಕ ಯೋಚನೆಯ ಅಂಗ"[14] ಆಗಿದೆ (ನೋಡಿರಿ 4:17 ಮತ್ತು ರೋಮಾಪುರ 1:28; 7:23). "ಆತ್ಮ" ಎಂಬುದು "ಮನಸ್ಸು" ಇದರ ಜೊತೆ ಸಂಯುಕ್ತವಾಗಿ ಸೂಚಿತವಾಗಿದೆ, ಆದರೆ ಇವೆರಡೂ ಬೇರೆಬೇರೆಯಾಗಿವೆ. ಇದು ದೇವರೊಂದಿಗೆ ಮತ್ತು ತನ್ನ ಸ್ವರೂಪದಲ್ಲಿ ಮಾಡಲ್ಪಟ್ಟವನೊಂದಿಗೆ ಅನ್ಯೋನ್ಯತೆಯನ್ನು ಆನಂದಿಸುವ ವ್ಯಕ್ತಿಯ ವ್ಯಕ್ತಿತ್ವವಾಗಿದೆ (ಆದಿಕಾಂಡ 1:26, 27). 1 ಕೊರಿಂಥ 14:14ರಲ್ಲಿ ಪೌಲನು "ಆತ್ಮ" ಮತ್ತು "ಮನಸ್ಸು" ಇವುಗಳ ಮಧ್ಯ ಭಿನ್ನತೆಯನ್ನು ಗೆರೆಯನ್ನು ಎಳೆದಿದ್ದಾನೆ. ಅರ್ಥವು ದಿನದಿಂದ ದಿನಕ್ಕೆ ಹೊಸದಾಗಲೇಬೇಕಾದ (ಆತ್ಮದ) ವ್ಯಕ್ತಿತ್ವ ಮತ್ತು (ಮನಸ್ಸಿನ) ಯೋಗ್ಯವಾದ ಸಾಮರ್ಥ್ಯದ ಕಾರಣ ಎಂಬ ಅರ್ಥ ಆಗಿರಲೇಬೇಕು (ನೋಡಿರಿ ರೋಮಾಪುರ 12:2; 2 ಕೊರಿಂಥ 4:16). ಕ್ರೈಸ್ತನು ಕ್ರಿಯಾತ್ಮಕವಾಗಿ ತನ್ನನ್ನು ತಾನು ನೂತನವಾಗಿಸಿಕೊಳ್ಳುವತ್ತ ತರುವಲ್ಲಿ ಕಾರ್ಯಮಾಡುತ್ತಿದ್ದಾನೆ ಎಂಬುದು ಇಲ್ಲಿ ಸೂಚಿಸಲ್ಪಟ್ಟ ಕ್ರಿಯಾಪದದ ರೂಪದ ಬಳಕೆಯು ಆಗಿದೆ.

## "ಹೊಸತನವನ್ನು ಧರಿಸಿಕೊಳ್ಳಿರಿ" (4:24)

**[24](ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ) ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.**

**ವಚನ 24.** ಈ ಸಂಗತಿಯಲ್ಲಿ ಪೌಲನು ಹೆಸರಿಸಿದ ಮೂರನೆಯ ಕಾರ್ಯವು **ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ** ಸ್ವಭಾವವನ್ನು ಬಿಟ್ಟುಬಿಡುವಂತೆ, ಇದು ಅನಿರ್ದಿಷ್ಟ ಸಮಯವನ್ನು ತೆಗೆದುಕೊಳ್ಳುವುದರಲ್ಲಿಯೂ ಸಹ ಇರುವುದಾಗಿದೆ. ಒಬ್ಬನು ಕ್ರಿಸ್ತನಲ್ಲಿ ದೀಕ್ಷಾಸ್ನಾನವನ್ನು ಹೊಂದಿದಾಗ, ಆತನು ಕ್ರಿಸ್ತನಲ್ಲಿ ಇರುವವನಾಗುತ್ತಾನೆ ಮತ್ತು ದೇವರ ಮನೆಯ ಸದಸ್ಯನೂ ಮತ್ತು ಕುಟುಂಬದವನೂ ಆಗುತ್ತಾನೆ (ನೋಡಿರಿ 2:19).

ದೇವರ ಮಗುವಾದಂತೆಯೇ, ಕ್ರೈಸ್ತನು ಕುಟುಂಬದಂತೆ ಇರುವುದನ್ನು ತನ್ನ ಮೇಲೆ ತೆಗೆದುಕೊಳ್ಳುತ್ತಾನೆ. ಆದ್ದರಿಂದ, ನೂತನ ಸ್ವಭಾವವು **ದೇವರ ಹೋಲಿಕೆಯ ಮೇರೆಗೆ** ಇರುವುದಾಗಿ ಪೌಲನು ಹೇಳುತ್ತಾನೆ. ನೂತನ ಸ್ವಭಾವವು ಸ್ವಯಂದ ರೀತಿಯಲ್ಲಿ ಹೊಸದಾಗಿ ಇರುವುದಲ್ಲ (ಇದನ್ನು ವ್ಯಕ್ತಪಡಿಸಲು *neos* ಪೌಲನು ಬಳಸಿರಬಹುದು), ಆದರೆ ಆಕಾರದಲ್ಲಿ ಹೊಸದಾಗಿರುವುದೇ ಆಗಿದ (*kainos* ದಿಂದ ವ್ಯಕ್ತಪಡಿಸಲ್ಪಟ್ಟಿದೆ). ಈ ಹೊಸತನವು "ಹಳೆಯದನ್ನು ವಿರೋಧಿಸುವಂಥದ್ದು" ಹಳೆಯದು "ಕಾಲದುದ್ದಕ್ಕೂ ಕಳಂಕ"ಮಯವಾದದ್ದು ಎಂಬರ್ಥವುಳ್ಳದ್ದಾಗಿದೆ.[15] ನಂತರ ಈ ಪತ್ರದಲ್ಲಿ, ಪೌಲನು "ದೇವರಿಗೆ ಪ್ರೀಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" (5:1) ಎಂಬ ಈ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ಈ ಪ್ರತಿಕ್ರಿಯೆಯು ಸೃಷ್ಟಿಯೇ ಆಗಿದೆ. ಮೊದಲ ಮಾನವನನ್ನು ದೇವರು ನೆಲದ ಮಣ್ಣಿನಿಂದ ಸೃಷ್ಟಿಸಿ ಮತ್ತು ಭೌತಿಕ ಜೀವಿತದ ಉಸಿರನ್ನು ಅವನಿಗೆ ಕೊಟ್ಟಿದ್ದಂತೆ, ಆತನು ಬಿದ್ದ ಮನುಷ್ಯನಿಂದ ಹೊರಗೆ ತಮ್ಮ ಆತ್ಮೀಕ ಜೀವಿತದಲ್ಲಿ ತನ್ನಂತೆ ಇರಲು ಹೊಸಸೃಷ್ಟಿಯನ್ನು ಮಾಡಿದನು. "ಸತ್ಕಾರ್ಯಗಳನ್ನು ಮಾಡಲು ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು" (2:10) ಎಂದು ಪೌಲನು ಆ ವಿಶ್ವಾಸಿಗಳ ಬಗ್ಗೆ ಹೇಳಿದ್ದರಲ್ಲಿ ಈ ಹಿಂದೆ ನಾವು ಸೃಷ್ಟಿಯ ವಿಚಾರವನ್ನು ಎದುರಿಸಿದ್ದೇವೆ. ದೇವರು ಮತ್ತು ಮನುಷ್ಯನ ಮಧ್ಯದ ಸಹಕಾರದಲ್ಲಿ ದೇವರು ತಾನೇ ಉಪಕ್ರಮಿಸುವುದನ್ನು ಈ ಪ್ರಕ್ರಿಯೆಯಲ್ಲಿ ಕಾಣುತ್ತೇವೆ (2:1-22) ಮತ್ತು ನಾವು ಸುವಾರ್ತೆಯನ್ನು ಸ್ವೀಕರಿಸಿ ಮತ್ತು ದೀಕ್ಷಾಸ್ನಾನದಲ್ಲಿ ಕ್ರಿಸ್ತನ ಮೇಲೆ ಇಟ್ಟಾಗ ಹೊಸ ಸ್ವಭಾವವನ್ನು ಧರಿಸಿಕೊಳ್ಳುವ ಜವಾಬ್ದಾರಿಯನ್ನು ನಾವು ಸಂಪೂರ್ಣಗೊಳಿಸುವವರಾಗಿದ್ದೇವೆ (ಗಲಾತ್ಯ 3:27).

ಕ್ರೈಸ್ತರಾಗುವವರಿಗೆ **ನೀತಿಯುಳ್ಳ** ಗುಣವು ದಯಪಾಲಿಸಿದ್ದು ಆಗಿದೆ. ಮಾನವನಿಗೆ

ತನ್ನದೇ ಆದ ನೀತಿವಂತಿಕೆಯು ಇಲ್ಲ; ಆತನು ಪಾಪದಲ್ಲಿ ಜೀವಿಸುವಾಗ, ಆತನು "ನೀತಿವಂತಿಕೆಯ ಹಂಗಿನವರಾಗಿರುವುದಿಲ್ಲ" (ರೋಮಾಪುರ 6:20). ಮಾನವನ ನೀತಿವಂತಿಕೆಗಾಗಿ ಕ್ರಿಸ್ತನು ಈ ಜಗತ್ತಿಗೆ ಬಂದನು (1 ಕೊರಿಂಥ 1:30) "ನಾವು ಆತನಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯನ್ನಾಗಿ ಮಾಡಿದನು" (2 ಕೊರಿಂಥ 5:21). ಆದ್ದರಿಂದ, ಒಬ್ಬನು ಸುವಾರ್ತೆಗೆ ವಿಧೇಯನಾದರೆ, ಆತನು ನೀತಿಗೆ ದಾಸನಾಗುತ್ತಾನೆ (ರೋಮಾಪುರ 6:17, 18). ಕ್ರಿಸ್ತನಲ್ಲಿರುವವರು ನೀತಿವಂತರಾಗುತ್ತಾರೆ ಎಂದು ದೇವರು ಘೋಷಿಸಿದ್ದಾನೆ; ಅದೇ ನೂತನ ಸೃಷ್ಟಿಯ ಉದ್ದೇಶವಾಗಿದೆ. ನೀತಿವಂತಿಕೆಯು ಇತರರೊಡನೆಯ ನಮ್ಮ ಸಂಬಂಧದಲ್ಲಿ ಯಾವುದು ಸರಿ ಎಂದು ಮಾಡುತ್ತೇವೆಯೋ ಅಲ್ಲಿ ತಾನೇ ಅವತರಿಸುವುದಾಗಿದೆ.

**ಪರಿಶುದ್ಧತೆಯೂ** ಸಹ ದೇವರಂತೆ ಇರುವುದಾಗಿದೆ ಎಂದು ಸೂಚಿಸಲ್ಪಟ್ಟಿದೆ ಮತ್ತು ಎಫೆಸದವರು ದೇವರು ಪರುಶುದ್ಧನಾದಂತೆ ಅವರೂ ಪರುಶುದ್ಧರು ಆಗಿದ್ದಾರೆ (ನೋಡಿರಿ 1 ಪೇತ್ರ 1:16). ಇದಕ್ಕೆ ಜೊತೆಯಾಗಿ, ನೀತಿವಂತಿಕೆಯು ದೇವರ ಗುಣವಾಗಿದ್ದು ವಿಶ್ವಾಸಿಗಳು ತಮ್ಮ ಮಾನವೀಕ ಸಂಬಂಧದಲ್ಲಿ ಅನುಕರಿಸುವವರಾಗಿದ್ದು, ಪರಿಶುದ್ಧತೆಯು ದೇವರಂತೆ ಇರುವದು ಮತ್ತು ಯಾವದು ಯೋಗ್ಯವಾಗಿದೆಯೋ ಅದನ್ನು ದೇವರಿಗೆ ಕೊಡುವದು ಆಗಿದೆ. ನೂತನ ಸ್ವಭಾವವು ಇತರರೊಡನೆಯ ಆತನ ಸಂಬಂಧ ಮತ್ತು ದೇವರೊಂದಿಗಿನ ಆತನ ಸಂಬಂಧ ಎರಡರಲ್ಲಿಯೂ ಜವಾಬ್ದಾರಿಗಳನ್ನು ಸಂಪೂರ್ಣಗೊಳಿಸುವುದಾಗಿದೆ. **ಸತ್ಯಾನುಗುಣವಾದ** ನೀತಿವಂತರಾಗಿ ಇರುವದು ಮತ್ತು ಪರಿಶುದ್ಧರಾಗಿ ಇರುವದು ಆಗಿದೆ; ಅದು ದೇವರ ಪ್ರಕಟಣೆಯ ಸತ್ಯವು ಗುಣಗಳನ್ನು ಬೋಧಿಸುವದು ಮತ್ತು ಅನ್ಯಜನರ ಅನೀತಿವಂತಿಕೆಯ ಜೀವನ ಶೈಲಿಯನ್ನು ವಿರೋಧಿಸುವದೂ ಎರಡು ಆಗಿದೆ (4:17-19).

## "ಸುಳ್ಳುತನದಿಂದ ಸತ್ಯದೆಡೆಗೆ ತಿರುಗಿಕೊಳ್ಳುವದು" (4:25)

**25 ಆದಕಾರಣ ಸುಳ್ಳಾಡುವದನ್ನು ಬಿಟ್ಟುಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕೆಂದರೆ ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ.**

ಯೋಗ್ಯರಾಗಿ ಕಾರ್ಯಮಾಡಲು ನಡೆಯುವದು ಅಥವಾ ಜೀವಿಸುವದು ಒಬ್ಬ ಕ್ರೈಸ್ತನು ಕಲಿಯುವಿಕೆಯಲ್ಲಿ ಒಳಗೊಂಡಂತೆ ಪೌಲನು ಈ ಕಾರ್ಯವನ್ನು ವಿವರಿಸಿದಂತೆ ಕ್ರಿಸ್ತನ ಭಾಗದಂತೆ ಇದ್ದು ಮನಸ್ಸಿನ ಆತ್ಮದ ನೂತನವಾಗಿಸಿವಿಕೆಯು ಇದಾಗಿದೆ. 4:25-32ರಲ್ಲಿ, ಒಬ್ಬ ಕ್ರೈಸ್ತನು ಕತ್ತಲೆಯಿಂದ ಬೆಳಕಿನೆಡೆಗೆ, ಹಳೆಯ ಸ್ವಭಾವದಿಂದ ಹೊಸ ಸೃಷ್ಟಿಯಕಡೆಗೆ ಹೇಗೆ ರೂಪಾಂತರಿಯಾದನು ಆತನು ನಿಶ್ಚಿತವಾದ ವಿವರಣೆಯನ್ನು ಕೊಡುವವನಾಗಿದ್ದಾನೆ.

**ವಚನ 25.** ಇಲ್ಲಿಯ ಬದ್ಧಿವಾದವು ಜೆಕರ್ಯ 8:16ರ ಬಿಡಿ ವಾಕ್ಯವಾಗಿದೆ. ಈ ಹೇಳಿಕೆಯು ಹೊಸತನವನ್ನು ಧರಿಸುದು, ದೇವರನ್ನು ಅನುಸರಿಸುವದು, ಮತ್ತು ನಮ್ಮ ಕರೆಗೆ ಯೋಗ್ಯವಾಗಿ ನಡೆಯುವ ಪ್ರಾಯೋಗಿಕ ಅನ್ವಯದಿಂದ ಪ್ರಾರಂಭವಾಗುತ್ತದೆ. **ಆದಕಾರಣ** ಇದು ಪೌಲನು ಏನನ್ನು ಹೇಳಬೇಕೆಂದು ಬಯಸುತ್ತಾನೋ ಅದನ್ನೇ ಬರೆದಿರುವುದನ್ನು ಸೇರಿಸುವುದಾಗಿದೆ. ಕ್ರೈಸ್ತರಾದ ನಾವು ಇತರರಿಗೆ ಸತ್ಯವನ್ನೇ ಆಡಬೇಕು - ನಾವು ದೇವರಿಗೆ ಆಧೀನವಾಗಿದ್ದೇವೆ ಎಂಬ ಕಾರಣದಿಂದ ಮಾತ್ರವಲ್ಲ ಆದರೆ **ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲಾ** ಎಂಬ ಕಾರಣದಿಂದಲೇ. ಈ ಪತ್ರದುದ್ದಕ್ಕೂ, ಸಭೆಯು ಕ್ರಿಸ್ತನ ಶಿರಕ್ಕೆ ಜೋಡಿಸಲ್ಪಟ್ಟ ಕ್ರಿಸ್ತನ ದೇಹ ವಾಗಿವೆ ಎಂದು ಪೌಲನು ತೋರಿಸಿದ್ದಾನೆ. ಕ್ರಿಸ್ತನ ದೇಹದ ಆತ್ಮೀಕ ಸದಸ್ಯರು ಭೌತಿಕ ದೇಹದ ಸದಸ್ಯರ ಹಾಗೆ ಇದ್ದಿದ್ದಾದರೆ, ಶಿರದ ಚಿತ್ತವನ್ನು ತೆಗೆದೊಯ್ಯುತ್ತಾರೆ ಮತ್ತು **ಸತ್ಯವನ್ನೇ ಆಡ**[ಬೇಕಾದ] ದೇಹವನ್ನು ಒಬ್ಬರಿಗೊಬ್ಬರು

ಹಂಚಿಕೊಳ್ಳುವದು ಅವಶ್ಯವಾಗಿದೆ. "ಸುಳ್ಳಾಡುವದು" (*pseudos*), ಗ್ರೀಕ್ ನಾಮಪದವು ಆಗಿದ್ದು, ಎಲ್ಲ ಸುಳ್ಳುತನವನ್ನು ಸುಳ್ಳಾಡಿವುದರ ಜೊತೆಯಿರುವ "ಒಂದು ಮುಖ್ಯ ಉದಾಹರಣೆಯನ್ನು" ಸೂಚಿಸುವುದಾಗಿದೆ.[16] **ಸುಳ್ಳಾಡುವುದನ್ನು ಬಿಟ್ಟುಬಿಟ್ಟು** ಎಂಬುದಕ್ಕಿರುವ ಗ್ರೀಕ್ ಪದವು ಪೂರ್ವ ಸ್ವಭಾವವನ್ನು ಹೇಗೆ ಒಂದೇ ಸಾರಿ ಬಿಟ್ಟಿಬಿಡುವುದೋ ಹಾಗೆಯೇ ಸುಳ್ಳಾಡುವುದನ್ನು ಒಂದೇ ಸಾರಿ ತೆಗೆದುಹಾಕಿಡುವದು ಎಂಬುದನ್ನು ಸೂಚಿಸುವುದಾಗಿದೆ.[17] ಇದು ಎಲ್ಲಾ ರೀತಿಯ ವಂಚನೆಯನ್ನು, ಅರ್ಧಸತ್ಯದಿಂದ ವಂಚಿಸುವ ಇಚ್ಛೆಯನ್ನು, ಮತ್ತು ಅವಶ್ಯವಿರುವ ಪೂರ್ಣ ಸತ್ಯದ ವಾಸ್ತವಿಕತೆಯನ್ನು ತಡೆಹಿಡಿಯುವದನ್ನು ಒಳಗೊಂಡಿದೆ. ಆ ಪದಗುಚ್ಛದೊಂದಿದೆ. ನೂತನ ಸ್ವಭಾವಕ್ಕಾಗಿನ ಮೂಲ ನಡತೆ, ಸತ್ತ ಮಾತನಾಡುವುದರ ಅವಶ್ಯಕತೆಯ ಪ್ರಾರಂಭದ ಪ್ರಾಯೋಗಿಕ ಮತ್ತು ನಿರ್ದಿಷ್ಟ ಚರ್ಚೆಯನ್ನು ಪೌಲನು ಪರಿಚಯಿಸುತ್ತಿದ್ದಾನೆ. ಇದನ್ನು ಮಾಡು ಇಲ್ಲವಾದರೆ ನಮ್ಮ ಸಹೋದರ ಸಹೋದರಿಯರನ್ನು ಅಲಕ್ಷಿಸುತ್ತದೆ ಮತ್ತು ಹಳೆಯ ಸ್ವಭಾವಕ್ಕೆ ಹಿಂತಿರುಗುತ್ತದೆ.

## "ಸಿಟ್ಟಿನಿಂದ ನಿಯಂತ್ರಣತೆಯತ್ತ ತಿರುಗುವದು" (4:26, 27)

**26ಕೋಪಮಾಡಬೇಕಾದರೂ ಪಾಪಮಾಡಬೇಡಿರಿ; ಸೂರ್ಯ ಮುಳುಗುವುದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ; 27ಸೈತಾನನಿಗೆ ಅವಕಾಶಕೊಡಬೇಡಿರಿ.**

**ವಚನ 26. ಕೋಪಮಾಡಬೇಕಾದರೂ ಪಾಪಮಾಡಬೇಡಿರಿ ಮೌನವಾಗಿರಿ** ಎಂದು ಕೀರ್ತನೆ 4:4ರಲ್ಲಿನ ಹಳೆಯ ಪರಿಚ್ಛೇದದ ಬಿಡಿ ಹೇಳಿಕೆಯನ್ನು ಪೌಲನು ತನ್ನ ಅಂಶವಾಗಿ ಬಳಸಿದ್ದಾನೆ. ಪೌಲನು "ಕೋಪಗೊಳ್ಳದಿರುವುದಕ್ಕೆ" ಅನುಮತಿಯನ್ನು ಕೊಟ್ಟಿಲ, ಆದರೆ ಕೋಪವು ಕಾಣಿಸಿಕೊಳ್ಳುವುದೆಂದು ಆತನು ಗುರುತಿಸಿದ್ದಾನೆ. ವಚನ 26 ಮತ್ತು 27ರಲ್ಲಿನ ಬುದ್ಧಿವಾದವು ಕೋಪವು ಎಷ್ಟು ಅಪಾಯವುಳ್ಳದ್ದು ಎಂದು ತೋರಿಸುತ್ತದೆ. ಪೌಲನು ವಚನ 26-31ರಲ್ಲಿ "ಕೋಪ" ಎಂಬ ಪದವನ್ನು (*orgizō*; 4:26) ಮತ್ತು (*orgē*; 4:31)ರಲ್ಲಿ ಬಳಸಿದ್ದಾನೆ. ಸಂದರ್ಭದಿಂದ ಕೋಪವನ್ನು ತೀರ್ಪುಮಾಡುವದರಿಂದ, *orgizō* ವು ನಿಯಂತ್ರಣದಲ್ಲಿರು ಕೋಪವು ಆಗಿರುವಾಗ *orgē* ವು ನಿಯಂತ್ರಣಕ್ಕೆ ಬಾರದಂಥ ಸಂಪೂರ್ಣವಾಗಿ ಬಿಡುಗಡೆಯಾದ ಕೋಪ ಅಥವಾ ದ್ವೇಶವು ಆಗಿರುತ್ತದೆ. ಅಲ್ಲಿ ದೇವರು ಅವಿಶ್ವಾಸಿಗಳ ಮತ್ತು ಅನೀತಿವಂತರ ಮೇಲೆ ತನ್ನ ಕೋಪವನ್ನು ಸುರಿಸುವಂಥ *orgē* ನೀತಿವಂತಿಕೆಯ ಕೋಪವು ಇರುವುದಾಗಿದೆ (ರೋಮಾಪುರ 1:18). ತನ್ನ ದಿವ್ಯತೆಯ ಬಗ್ಗೆ ವಿಪುಲವಾಗಿ ಸಾಕ್ಷಿಗಳು ಕೊಡಲ್ಪಟ್ಟರೂ ಕೂಡಾ ಆತನ ಮೇಲೆ ಕೆಲವರು ವಿಶ್ವಾಸಿವಿಡಲು ನಿರಾಕರಿಸಿದವರ ವಿರುದ್ಧ ಕ್ರಿಸ್ತನೂ *orgē* ದ ಮೂಲಕ ಕೋಪಗೊಂಡರು (ಮಾರ್ಕ 3:5), ಆದರೆ ಆತನು ತನ್ನ ಕೋಪಕ್ಕೆ ಕಾರಣವಾದನು ಮತ್ತು ಅದನ್ನು ನೀತಿವಂತಿಕೆಯ ರೀತಿಯಲ್ಲಿ ವ್ಯಕ್ತಪಡಿಸಿದನು.

ಎಲ್ಲಾ ಕೋಪವು ತಪ್ಪಾಗಿರದು, ಆದರೆ ಕೋಪವು ಅಪಾಯಕರದದ್ದಾಗಿರಬಹುದು. ನಾವು ಕೋಪಗೊಂಡಾಗ, ನಾವು ಪಾಪಕರವಾದ ಸಂಗತಿಗಳನ್ನು ಮಾಡಬಹುದು ಅಥವಾ ಮಾತನಾಡಬಹುದು. ಪೌಲನು "ಕೋಪಮಾಡಬೇಕೆದರೂ ಪಾಪಮಾಡಬೇಡಿರಿ" ಎಂದು ಹೇಳುತ್ತಾನೆ. ಇದಕ್ಕೆ ಜೊತೆಯಾಗಿ, ಪೌಲನು ಕೋಪದ ಮನೋಧರ್ಮದ ಅಸ್ತಿತ್ವದ ನಿಷೇಧಿ ಸುವಿಕೆಯ ಬಗ್ಗೆ ಹೇಳುತ್ತಾ **ಸೂರ್ಯ ಮುಳುಗುವುದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ** ಎನ್ನುತ್ತಾನೆ. "ಕೋಪ" (*parorgismos*) ಎಂಬ ಪದಕ್ಕೆ ಇರುವ ಪದಗುಚ್ಛವು ಭಿನ್ನವಾಗಿದೆ ಮತ್ತು ಪೌಲನು ಈಗಾಗಲೇ ಹೇಳಿದ್ದನ್ನು, "ಇದೊಂದು ಸಹಿಸುವಂಥ ಬಲವು ಮತ್ತು ಪ್ರಚೋದಿಸುವಂಥ ಕೋಪವನ್ನು ಸೂಚಿಸುವ ಬಲಪಡಿಸುವಂಥದ್ದು" ಕೂಡಾ ಆಗಿದೆ.[18] ಕೋಪವು ನಮ್ಮ ಜೀವಿತದಲ್ಲಿ ಉದ್ರೇಕವನ್ನು ತರುವುದಾಗಿರಬಹುದು,

ಆದರೆ ನಾವು ಕೋಪಗೊಂಡಾಗ ನಾವು ಏನನ್ನು ಮಾಡುತ್ತೇವೆ ಮತ್ತು ಹೇಳುತ್ತೇವೆ ಎಂಬುದರ ಬಗ್ಗೆ ಕಾಳಜಿಯುಳ್ಳವರಾಗಿ ರಬೇಕು ಮತ್ತು ಆಗಲೇ ನಾವು ನಮ್ಮ ಕೋಪವನ್ನು ಮೆಟ್ಟಿನಿಲ್ಲಬಹುದು.

**ವಚನ 27. ಸೈತಾನನಿಗೆ ಅವಕಾಶಕೊಡಬೇಡಿರಿ** ಎಂಬುದು ಆಗಾಗಲೇ ನಿರಂತವಾಗಿ ಕಾಣಿಸಿಕೊಂಡ ಕಾರ್ಯವನ್ನು ನಿಷೇಧಿಸುವುದಾಗಿದೆ. "ಸೈತಾನನಿಗೆ ಸಂದರ್ಭಗಳನ್ನು [ಅವಕಾಶಗಳನ್ನು] ಕೊಡುವ ಕಾರ್ಯವನ್ನು ನಿಲ್ಲಿಸಿರಿ" ಎಂದು ಹೇಳುತ್ತಿದ್ದಾನೆ.[19] ತಪ್ಪಾದ ಸ್ಥಳದಲ್ಲಿ ವಿಶ್ವಾಸವಿಟ್ಟ ಕೋಪವು ಸೈತಾನನು ನಮ್ಮ ಜೀವಿತದಲ್ಲಿ ಪ್ರವೇಶವನ್ನು ಕೊಡುವುದಾಗಿದ್ದು ಇದು ಪಾಪಕ್ಕೆ ನಡೆಸಬಹುದಾದಂಥದ್ದು ಆಗಿದೆ. ಪೌಲನು ದುಷ್ಟ ಆತ್ಮನನ್ನು ನೈಜವಾದ ಆತ್ಮೀಕ ಶಕ್ತಿಯಂತಿರುವ "ಸೈತಾನ" (ಪ್ರಕಟನೆ 12:9), ಎಂದು ಗುರುತಿಸಿದ್ದಾನೆ. 2:2ರಲ್ಲಿ, "ಹೆಸರಿಲ್ಲದಿದ್ದಾಗ್ಯೂ ಕೂಡಾ ಸೈತಾನನು ಆಕಾಶದಲ್ಲಿರುವ ಶಕ್ತಿಯ ರಾಜ ... ಈ ಆತ್ಮವು ಈಗ ಅವಿಶ್ವಾಸಿಗಳಲ್ಲಿ ಕಾರ್ಯಮಾಡುತ್ತಿದೆ" ಎಂದು ಸೂಚಿಸಲ್ಪಟ್ಟವನಾಗಿದ್ದಾನೆ. ಮುಂದೆ ಈ ಪತ್ರದಲ್ಲಿ, "ಸೈತಾನನ ಯೋಜನೆಗಳು" ಮತ್ತು "ಕೆಟ್ಟತನದ ಉರಿಯುವ ಬಾಣ"ಗಳೊಡನೆ ಕ್ರೈಸ್ತರು ದುಷ್ಟತನದ ವಿರುದ್ಧ ಆತ್ಮೀಕ ಯುದ್ಧದ ಸವಾಲನ್ನು ಹೊಂದಿದ್ದಾರೆ ಎಂದು ಪೌಲನು ಹೇಳುತ್ತಾನೆ (6:10-16). ಅನಿಯಂತ್ರಿತ ಕೋಪವು ಸೈತಾನನಿಗೆ ಒಂದು ಅವಕಾಶವನ್ನು ಕೊಡುವುದಾಗಿದ್ದು, ಮಾರ್ಪಾಟಾದ ಮನಸ್ಸಿನೊಡನೆ ಹೊಸದಾಗಿ ಜೀವಿಸುವುದರ ಮತ್ತು ಯೋಗ್ಯನಡತೆಯ ವಿರುದ್ಧ ಇರುವುದಾಗಿದೆ.

## "ಕೆಲಸ ತಪ್ಪಿಸಿಕೊಳ್ಳುವದರಿಂದ ತಿರುಗಿಕೊಳ್ಳುವದು" (4:28)

**28ಕಳವು ಮಾಡುವವನು ಇನ್ನು ಮೇಲೆ ಕಳವುಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವದು.**

**ವಚನ 28.** ಮುಂದೆ, **ಕಳವು ಮಾಡುವವನು** ಇನ್ನು ಮೇಲೆ ಕಳವು ಮಾಡದೆ ಇರಲಿ ಎಂದು ಪೌಲನು ಕಳವುಮಾಡುವವರನ್ನು ಕುರಿತು ಕೇಳುತ್ತಾನೆ. ಧರ್ಮಶಾಸ್ತ್ರವು ಕಳವುಮಾಡುವದನ್ನು ನಿಷೇಧಿಸಿದೆ (ವಿಮೋಚನೆಕಾಂಡ 20:15; ಯಾಜಕಕಾಂಡ 19:11; ಧರ್ಮೋಪದೇಶಕಾಂಡ 5:19). ಮತ್ತು ಇದೇ ನಿಷೇಧವು ಹೊಸ ಒಡಂಬಡಿಕೆಯಲ್ಲಿ ಮುಂದುವರಿದಿದೆ (ಮಾರ್ಕ 10:19; ರೋಮಾಪುರ 13:9). ಕಳ್ಳನು ಕಡೇಪಕ್ಷ ಒಪ್ಪಿಕೊಳ್ಳುವಂತಾಗಲು ಈ ನಿಯಮದ ಮೇಲೆ ಒತ್ತುಕೊಡುವಿಕೆಯು ಎಫೆಸದಲ್ಲಿ ಅವಶ್ಯವಿತ್ತು. ಈ ಕ್ರೈಸ್ತರು ಒಂದು ಸಮಯದಲ್ಲಿ ಕಳ್ಳರಾಗಿದ್ದರು ಎಂದಲ್ಲ, ಆದರೆ ಕೆಲವರು ಇನ್ನೂ ಕಳವುಮಾಡುತ್ತಿದ್ದರು. ಇಲ್ಲಿ ಬಳಸಲ್ಪಟ್ಟ ಕ್ರಿಯಾಪದವು ನಿರಂತರತೆಯನ್ನು ಅಥವಾ ಪುನರಾವರ್ತನೆಯ ಕ್ರಮವನ್ನು ಸೂಚಿಸುತ್ತದೆ.[20] ಪೌಲನು "ಕಳವುಮಾಡುವದನ್ನು ನಿಲ್ಲಿಸಿರಿ" ಎಂದು ಹೇಳುತ್ತಿದ್ದಾನೆ!

ಕಳವುಮಾಡುವದಕ್ಕೆ ವಿರುದ್ಧವಾಗಿ ಇರುವದು ಶ್ರಮವಹಿಸಿ ಕೆಲಸಮಾಡುವದು ಆಗಿದ್ದು ಕೈಯಿಂದ ಯಾವುದಾದರೊಂದು **ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ.** ಆದಾಮನು ಪಾಪದಲ್ಲಿ ಬೀಳುವ ಮುನ್ನ ಆತನಿಗೆ ಏದೇನ ತೋಟದಲ್ಲಿ "ವ್ಯವಸಾಯಮಾಡುವದಕ್ಕೂ ಕಾಯುವದಕ್ಕೂ" ಇಡಲ್ಪಟ್ಟಿದ್ದನು (ಆದಿಕಾಂಡ 2:15). ಆತನು ಬಿದ್ದ ನಂತರವೂ, ಆತನ ಕೆಲಸವು ಮೊದಲಿಗಿಂತ ಕಠಿಣವಾದಾಗ್ಯೂ ಕೂಡಾ ಆದಾಮನು ಕೆಲಸದಲ್ಲಿ ಮುಂದುವರೆದನು (ಆದಿಕಾಂಡ 3:17-19). ಕೆಲಸವು ಹತ್ತು ಆಜ್ಞೆಗಳ ಒಂದು ಭಾಗವಾಗಿದ್ದು "ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು" ಎಂದು ದೇವರು ಹೇಳಿದ್ದಾನೆ (ವಿಮೋಚನೆಕಾಂಡ 20:9). ಹೊಸ ಒಡಂಬಡಿಕೆಯಲ್ಲಿ ಈ ನಿಯಮವು ಗುರುತಿಸಲ್ಪಟ್ಟಿದೆ ಮತ್ತು ಯೇಸು ಏಳನೆಯ ದಿನದಲ್ಲಿ "ಕೆಲಸವನ್ನು ಮಾಡಿ"

ಸಬ್ಬತ್ ದಿನವನ್ನು ಮುರಿದಿದ್ದಕ್ಕಾಗಿ ನಿಂದನೆಗೆ ಒಳಗಾದನು (ನೋಡಿರಿ ಮಾರ್ಕ 2:23-28; 3:1-6). ಪೌಲನು ಗುಡಾರ ಮಾಡುವ ಕೆಲಸವನ್ನು ಮಾಡುವುದರ ಮೂಲಕ ತನ್ನನ್ನು ತಾನು ಬೆಂಬಲಿಸಿಕೊಳ್ಳುತ್ತಿದ್ದನು (ಅಪೊಸ್ತಲರ ಕೃತ್ಯಗಳು 18:3). ಆತನು ತಾನು ಮಾತ್ರ ಕೆಲಸಮಾಡುತ್ತಿರಲಿಲ್ಲ, ಆದರೆ "ಕೆಲಸಮಾಡಲೊಲ್ಲದವನು ಊಟಮಾಡಬಾರದೆಂದು" ಹೇಳುವ ಮೂಲಕ ಇತರರನ್ನು ಕೆಲಸಮಾಡುವುದಕ್ಕೆ ಹುರಿದುಂಬಿಸುತ್ತಿದ್ದನು (2 ಥೆಸಲೋನಿಕ 3:10; ನೋಡಿರಿ 1 ಕೊರಿಂಥ 4:12; 1 ಥೆಸಲೋನಿಕ 4:11, 12).

ಕೆಲಸಕ್ಕೋಸ್ಕರ ಪೌಲನ ಪ್ರೇರಣೆಯು ಎರಡು ರೀತಿಯದ್ದಾಗಿದೆ. (1) ಕೆಲಸವು ಪ್ರಯೋಜನಕರವಾಗಿರಬೇಕು. ರಚನಾತ್ಮಕವಾಗಿರುವಂಥದ್ದನ್ನು ಮಾಡುವುದಕ್ಕೆ ಇದು ವ್ಯಕ್ತಿಗೆ ಒಳ್ಳೆಯದಾಗಿದೆ ಇದರಿಂದ ತನ್ನಷ್ಟಕ್ಕೆ ತಾನೇ ಆತನು ಆಧಾರವಾಗಿರುವದು ಆತನಿಗೆ ಅವಶ್ಯವಿದೆ. ಸಮಾಜಕ್ಕೆ ಕೆಲಸವು ಮೌಲ್ಯವುಳ್ಳಂತೆ ಇದು ಸರಕನ್ನು ಮತ್ತು ಸೇವೆಯನ್ನೂ ಒದಗಿಸುವುದಾಗಿದೆ. ಜನರು ತಾವು ಕಾರ್ಯದಲ್ಲಿ ಮಗ್ನರು ಮತ್ತು ಉತ್ಪಾದಕತ್ವವನ್ನು ಹೊಂದಿದ್ದಾಗ ಸಂತೋಷವುಳ್ಳವರಾಗಿರುತ್ತಾರೆ. ಕೆಲಸವು ಜನರಿಗೆ ಗೌರವವನ್ನು ತರುವುದಾಗಿದೆ. (2) ಕೆಲಸವು **ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ** ಆಗುವುದನ್ನು ಒದಗಿಸುವುದಾಗಿದೆ. ಇದು ಆದಿಕಾಲದ ಸಭೆಯಲ್ಲಿ ಅಭ್ಯಾಸದಲ್ಲಿರುವದು ಆಗಿತ್ತು. ಉದಾಹರಣೆಗೆ, ಯೆರೂಸಲೇಮಿನಲ್ಲಿರುವ ಸಭೆಯವರು ಒಬ್ಬರು ಮತ್ತೊಬ್ಬರೊಡನೆ ಹಂಚಿಕೊಳ್ಳುತ್ತಿದ್ದರು ಹೀಗೆ ಅವರಲ್ಲಿ ಯಾವೊಬ್ಬನು ನಿರ್ಗತಿಕ ವ್ಯಕ್ತಿಯು ಇರಲಿಲ್ಲ (ಅಪೊಸ್ತಲರ ಕೃತ್ಯಗಳು 2:45; 4:34). ಯೂದಾಯದಲ್ಲಿ ಬರಗಾಲವು ಬಂದಾಗ, ಯೂರೋಪದ ಮತ್ತು ಆಶ್ಯ ಸೀಮೆಯ ಸಭೆಗಳು ನಿರ್ಗತಿಕ ಸಹೋದರರಿಗೆ ಪರಿಹಾರದ ಸಂಗತಿಗಳನ್ನು ಕಳುಗಿಸಿದರು (ಅಪೊಸ್ತಲರ ಕೃತ್ಯಗಳು 11:29, 30; ರೋಮಾಪುರ 15:26; 2 ಕೊರಿಂಥ 8; 9). "ದೇವಜನರ ಅವಶ್ಯಕತೆಗಳಿಗಾಗಿ" ಸಹಾಯಮಾಡಬೇಕೆಂದು ಪೌಲನು ರೋಮದವರಿಗೆ ಬುದ್ಧಿವಾದ ಮಾಡುತ್ತಾನೆ (ರೋಮಾಪುರ 12:13).

> ಈ ಸರಳವಾದ ವಾಕ್ಯವು [4:28] ಸಂಪೂರ್ಣವಾಗಿ ತೆಗೆದುಕೊಳ್ಳಲ್ಪಟ್ಟಾಗ, ಇದು ಕರೆಯಲ್ಲಿ ಮಹತ್ತಾದ ಬದಲಾವಣೆಗಳನ್ನು ಒಳಗೊಂಡವುಗಳಲ್ಲಿನ ಪೂರ್ವಸ್ವಭಾವವನ್ನು ಬಿಟ್ಟುಬಿಡಲು ಮತ್ತು ಹೊಸದನ್ನು ಧರಿಸುವದನ್ನು ಸುಂದರವಾಗಿ ದೃಷ್ಟಾಂತೀಕರಿಸುವುದಾಗಿದೆ.[21]

## "ಅನಾರೋಗ್ಯಕರ ಮಾತುಗಳಿಂದ ಜ್ಞಾನದ ಮಾತಿನತ್ತ ತಿರುಗುವದು" (4:29)

**[29]ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತು ಹೊರಬರಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ.**

**ವಚನ 29.** ಕ್ರೈಸ್ತನ ಮಾತುಗಳಲ್ಲಿ ಹೊಸತವು ಯಾವಾಗಲೂ ಪ್ರಾಯೋಕಿರವಾಗಿರುತ್ತದೆ. ಕೆಟ್ಟಮಾತುಗಳು ಯಾವಾಗಲೂ ದೇಹದ ಐಕ್ಯವನ್ನು ಮತ್ತು ಈ ಅಧ್ಯಾಯದ ಮೊದಲಲ್ಲಿ ಪೌಲನು ಮಾತನಾಡಿದಂಥ ಯೋಗ್ಯನಡೆಯನ್ನು ಕಂಡಿಸುವುದಾಗಿದೆ. ಎರಡು ಹಿಂದಿನ ಬೋಧನೆಗಳಲ್ಲಿ, ಪೌಲನು ಮಾಡಿದ ಎರಡು ಹೇಳಿಕೆಗಳು ಪ್ರೇರಣಾತ್ಮಕ ಕರಾರುಗಳ ಮೂಲಕ ನಡೆಸಲ್ಪಟ್ಟಿವೆ. ವಚನ 29 ಅಹಿತಕರ ಮಾತುಗಳನ್ನು ನಿಷೇಧಿಸಿದಂಥ ಮತ್ತು ಒಳ್ಳೆಯ ಮಾತುಗಳನ್ನು ಪ್ರೇರೇಪಿಸುವಂಥ ಆತನು ಅದೇ ವಿಧದತ್ತ ನಡೆಸಿದೆ. ಕ್ರೈಸ್ತರು ಜ್ಞಾನಕೊಡುವ ಪದಗಳನ್ನು ಮಾತ್ರ ಬಳಸಬೇಕು ಇದರಿಂದ ಪರಿಶುದ್ಧಾತ್ಮನು ದುಃಖಕ್ಕೀಡಾಗುವನು (4:30). **ಕೆಟ್ಟ ಮಾತುಕ್ಕೋಸ್ಕರ** (*sapros*) ಇದರ ಅಕ್ಷರ ಸಹ ಅರ್ಥವು "*ಧರಿಸದಿರು* ಮತ್ತು ಉಪಯೋಗಕ್ಕೆ ಬರದ ... *ಅಯೋಗ್ಯವಾದ*" ಎಂದಾಗಿದೆ.[22] ಇದು

"ಒಳ್ಳೆಯ" ದರ್ಪನೆ ವ್ಯತ್ಯಾಸವಾಗಿದ್ದು "ಲಾಭವಿಲ್ಲದ, ಯಾರೊಬ್ಬರಿಗೂ ಒಳ್ಳೆಯದವಲ್ಲದ" ಎಂಬಂಥದ್ದನ್ನು ಸೂಚಿಸುವುದಾಗಿದೆ.[23]

ಪದಗಳ ಸ್ಥಳದಲ್ಲಿ ಅದು ಐಕ್ಯತೆಯಿಂದ ವಂಚಿಸುವಂಥದ್ದು ಮತ್ತು ಇತರರ ಕಣ್ಣೀರಿಳಿಸುವದೂ ಆಗಿದ್ದು, ಎಫೆಸದವರು **ಕಾಲೋಚಿತವಾದ ಮಾತು ಇದ್ದರೆ** ಆ ಮಾತುಗಳನ್ನು ಆಡಲು ಪ್ರೇರೇಪಿಸಲ್ಪಟ್ಟರು. ದೇಹದ ಪ್ರತಿಯೊಬ್ಬ ಸದಸ್ಯರೂ ಸಭೆಯನ್ನು ಸುಧಾರಿಸುವ (ರಚಿಸುವ) ತನ್ನ ಪಾಲನ್ನು ಮಾಡಬೇಕು (4:12, 16). ದೇಹದ ರಚನೆಯ ಒಂದು ಮಾರ್ಗವೆಂದರೆ ಅವರು ಏನಾಗಿದ್ದಾರೋ ಆದಾಗಿರುವ ಮತ್ತು ಯಾವ ಕಾರ್ಯಮಾಡಬೇಕೆನ್ನುತ್ತಾರೋ ಅದನ್ನು ಮಾಡುವ ಪ್ರೇರಣೆಯ ಮಾತುಗಳನ್ನು ಆಡಬೇಕು. ಈ ತರದ ಪದಗಳು ಯಾವಾಗಲೂ **ಕೇಳುವವರ ಹಿತಕ್ಕಾಗಿ ಆಡುವದು** ಆಗಿರುತ್ತದೆ. "ಕೇಳುವವರ ಹಿತಕ್ಕಾಗಿ" ಎಂಬುದು ಒಬ್ಬರ ಮೇಲೆ "ಪ್ರಯೋಜಕರ ಆಶೀರ್ವಾದ" ಎಂಬ ಕೃಪಾಪೂರಿತವಾದ ಪದಗಳ ಬಗ್ಗೆ ಮಾತನಾಡುವುದಾಗಿದೆ.[24] 4:1-32ರಲ್ಲಿ ಪೌಲನು ಕೇಂದ್ರೀ ಕರಿಸಿದಂಥವುಗಳಾದ ಯೋಗ್ಯವಾದ ನಡೆ ಮತ್ತು ನೂತನವಾಗಿಸುವತ್ತಿನ ಹೊಸದಾದ ಮನಸ್ಸು ಇವುಗಳು ಕ್ರೈಸ್ತನು ಏನನ್ನು ಹೇಳುವನೋ ಮತ್ತು ಮಾಡುವನೋ ಅದರ ಮೇಲೆ ಇರುವಂಥದ್ದಾಗಿದೆ.

## "ದುಃಖದಿಂದ ಆತ್ಮನು ಕೊಡುವ ಸಂಕೋಷಕ್ಕೆ ತಿರುಗುವದು" (4:30)

**30ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ. ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದಿರಲ್ಲಾ.**

**ವಚನ 30.** ಈ ನಕರಾತ್ಮಕತೆಯು ಅತ್ಯಗತ್ಯವಾದ ಅರ್ಥವನ್ನು ಕೊಡುವುದಾಗಿದ್ದು, ಇದರಂತೆ, "ನಿಷೇಧಿಸಲ್ಪಟ್ಟ ಸಂಗತಿಗಳನ್ನು ಮಾಡುವುದರಿಂದ ದೇವರ ಪರಿಶುದ್ಧಾತ್ಮನನ್ನು ಕಣ್ಣೀರುಬಿಡುವುದನ್ನು ನಿಲ್ಲಿಸಿರಿ" ಎಂದಾಗಿದೆ. ದೇವರ ವಾಕ್ಯಗಳು ಪರಿಶುದ್ಧಾತ್ಮಕ ಪ್ರೇರಣೆಯ ಮೂಲಕ ತಿಳಿಯುವಂತೆ ಮಾಡಲ್ಪಟ್ಟಿವೆ (ನೋಡಿರಿ 1 ಕೊರಿಂಥ 2:13; 2 ತಿಮೊಥೆ 3:16, 17; 2 ಪೇತ್ರ 1:19-21). ವಾಕ್ಯವನ್ನು ಕೇಳುವುದರಲ್ಲಿ ವಿಫಲನಾಗುವದು ಪರಿಶುದ್ಧಾತ್ಮನನ್ನು ಪ್ರತಿಬಂದಿಸುವುದು ಆಗಿದೆ (ನೋಡಿರಿ 1 ಥೆಸಲೋನಿಕ 5:19). ಪರಿಶುದ್ಧಾತ್ಮನು ವಿಶ್ವಾಸಿಗಳಲ್ಲಿ ಐಕ್ಯತೆಯನ್ನು ನೋಡುವವನಾಗಿದ್ದಾನೆ (4:3), ಮತ್ತು ಈ ರೀತಿಯಲ್ಲಿ ಸಭೆಯ ಐಕ್ಯತೆಯನ್ನು ಕದಲಿಸುವ ಯಾವುದೇ ಆಗಲಿ ಅಂದರೆ ತಪ್ಪಾದ ಮಾತುಗಳು ಮತ್ತು ಕಾರ್ಯಗಳು ಪರಿಶುದ್ಧಾತ್ಮನನ್ನು ಕಣ್ಣೀರಿಡುವಂತೆ ಮಾಡುತ್ತವೆ. "ಕಣ್ಣೀರು" ಇದರ ಅರ್ಥವು "ಅನೇಕ ಮಾನಸಿಕ ಅಥವಾ ಭಾವನಾತ್ಮಕ ಕಾರಣಗಳು"[25] ಆಗಿವೆ ಮತ್ತು ಇಸ್ರಾಯೇಲರು ತಿರುಗಿಬಿದ್ದಾಗ ಆ ಸಮಯದಲ್ಲಿ ಪ್ರವಾದಿಯ ಮಾತಾದ "ಪವಿತ್ರಾತ್ಮನನ್ನು ದುಖಪಡಿಸಿದವರು" ಎಂದು ಯೆಶಾಯ 63:10ರಲ್ಲಿ ಇವು ಜ್ಞಾಪಕ ತರುವಂಥದ್ದು ಆಗಿದೆ.

ಆತ್ಮನನ್ನು ದುಃಖಪಡಿಸುವದಕ್ಕೆ ಪೇರಕವಾದಂತೆ, ಪೌಲನು **ತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದಿರಲ್ಲಾ** ಎಂದು ಸೇರಿಸಿದ್ದಾನೆ. ಎಫಎಸದವರು ಕ್ರಿಸ್ತನಲ್ಲಿ ಪ್ರವೇಶಿ ಸಿದಾಗ ಅವರು ಬಿಡುಗಡೆಗೊಳಿಸಲ್ಪಟ್ಟರು (1:7) ಮತ್ತು ತಮ್ಮ ಅಂತಿಮ ಬಿಡುಗಡೆಗೋಸ್ಕರ ಆತ್ಮನ ಮೂಲಕ ಮುದ್ರೆಹೊಂದಲ್ಪಟ್ಟರು (1:13, 14) ಎಂದು ಹಿಂದೆಯೇ ದೃಢವಾಗಿ ಹೇಳಿದ್ದಾನೆ. ಪವಿತ್ರಾತ್ಮನಿಂದ ಮುದ್ರೆಹೊಂದುವದು ಅಂತ್ಯದ ದಿನದಲ್ಲಿ ಮತ್ತು ಕ್ರಿಸ್ತನ ಬರೋಣದಲ್ಲಿ ಸಂಪೂರ್ಣ ಬಾಧ್ಯತೆಯ ವಾಗ್ದಾನವಾಗಿದೆ. ಕ್ರೈಸ್ತರು ಪ್ರಸ್ತುತ ದೇವರ ಪವಿತ್ರ ಗುಣಕ್ಕೋಸ್ಕರ ಮುದ್ರೆಹೊಂದುವದು ಮತ್ತು ಮಹಿಮಾಯುತ ಭವಿಷ್ಯದ ಭರವಸೆಯನ್ನು ಹೊಂದುವದು ಆಗಿದೆ. ದೀಕ್ಷಾಸ್ನಾನದಲ್ಲಿ ಆತ್ಮನನ್ನು ಕೊಡುವದು ನೋಡಿರಿ (ಅಪೊಸ್ತಲರ ಕೃತ್ಯಗಳು 2:38) ಆತ್ಮದೊಡನೆ ಮುದ್ರೆಹೊಂದುವದರೊಡನೆ ಬರುವುದಾಗಿದ್ದು ದೇವರೊಂದಿಗಿನ ನಿತ್ಯಮನೆಯ

ಭರವಸೆಯಂತಿದೆ ಎಂದು ಪೌಲನು ದೃಢವಾಗಿ ಹೇಳುತ್ತಾನೆ. ಆದ್ದರಿಂದ ವಾಕ್ಯದಲ್ಲಿ ಅವರ ಪ್ರಸ್ತುತ ಇರುವಿಕೆಯು ಮತ್ತು ಕಾರ್ಯವು ಆತನಿಗೆ ಸಂತೋಷವನ್ನು ತರುವುದಾಗಿದೆಯೇ ಹೊರತು ದುಃಖವನಲ್ಲ.

## "ಕಹಿತನದಿಂದ ಹೆಂಗರಳುತನಕ್ಕೆ ತಿರುಗುವದು" (4:31, 32)

**[31]ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ. [32]ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ.**

**ವಚನಗಳು 31, 32.** 4:1-32ರಲ್ಲಿನ ಚರ್ಚೆಯಲ್ಲಿ ಪೌಲನು ಅಂತಿಮವಾಗಿ ನಿಷೇಧಗಳೊಡನೆ ಮತ್ತು ಬೋಧನೆಯೊಂದಿಗೆ ಮುಗಿಸುತ್ತಾನೆ. ಈ ಸೂಚನೆಗಳು ಹೊಸದಾದ ಮನಸ್ಸಿನ ಮತ್ತು ನೂತನ ಸ್ವಭಾವದೊಡನೆ ಜೊತೆ ಹಾಸುಹೊಕ್ಕಾಗಿಯೂ ಇರುವುದಾಗಿದೆ. ಆರು ನಿರ್ದಿಷ್ಟ ಅವಗುಣಗಳನ್ನು ಅಲಕ್ಷಿಸಬೇಕಾಗಿದೆ.

1. **ದ್ವೇಷ** (*pikria*) "ಹಿಂದಿನ ಅಸಂತೋಷದಲ್ಲಿ ಮಡುಗಟ್ಟಿನಿಲುವ ಕಠಿಣ ಹೃದಯದ" ಬಗ್ಗೆ ಮಾತನಾಡುವುದಾಗಿದೆ.
2. **ಕೋಪ** (*thumos*) "ಆಕ್ರೋಷದ ಸಿಡಿದೇಳುವಿಕೆಯನ್ನು" ಸೂಚಿಸುವುದಾಗಿದೆ.
3. **ಕ್ರೋಧ** (*orgē*), ಇದಕ್ಕೆ ಸಮಾನವಾದ ಪದವು ವಚನ 26ರಲ್ಲಿ ಬಳಸಲ್ಪಟ್ಟಿದ್ದು, "ವೈರತ್ವವವನ್ನು ಪರಿಗಣಿಸುವ ಅನುಭವ" ಎಂದು ಸೂಚಿಸಲ್ಪಟ್ಟಿದೆ.
4. **ಕಲಹ** (*kraugē*) ಇದೊಂದು "ಬಾಹ್ಯತೋರಿಕೆಯ ಕೋಪ" ಆಗಿದ್ದು ಕೂಗಾಡುವಂಥದ್ದು ಆಗಿದೆ.
5. **ದೂಷಣೆ** (*blasphēmia*) ಬೈಗಳದ ಮಾತುಗಳನ್ನು ಆಡುವದು ಎಂದು ಇದರ ಅರ್ಥ.
6. **ದುಷ್ಟತನ** (*kakia*) ಇತರರಿಗೆ ತೊಂದರೆಯನ್ನುಂಟು ಮಾಡುವಂತೆ ರೂಪಿಸಲ್ಪಟ್ಟ ಯಾವುದೇ ಮಾತುಗಳು ಅಥವಾ ಕಾರ್ಯಗಳು.[26]

ಈ ದುರ್ಗುಣಗಳು ನವೀಕರಿಸಲ್ಪಟ್ಟ ಮನಸ್ಸಿನ ಜೊತೆಗೆ ಇಲ್ಲದೆ ಇರುವವು ಆಗಿವೆ ಮತ್ತು ಅವನ್ನು **ದೂರಮಾಡ**ಬೇಕು, *airō* ಅವಶ್ಯಕ ರೀತಿಯಾದ ತಕ್ಷಣವೇ ಆರಂಭಿಸುವಂತೆ ಬೇಡಿಕೆಯನ್ನೊಡ್ಡುವವು ಆಗಿವೆ. ಈ ಪ್ರಕರಣದಲ್ಲಿ, "ಎತ್ತಲ್ಪಟ್ಟರು ... ತೆಗೆದುಹಾಕಿದರು ... ದೂರಮಾಡಿದರು" ಎಂದು ಎಫೆಸದವರು ತಕ್ಷಣವೇ ಆರಂಭಿಸಿದ ದುರ್ಗುಣಗಳನ್ನು ಸೂಚಿಸಲಾಗಿದೆ.[27]

ದೂರಮಾಡಬೇಕು ಎಂಬ ದುರ್ಗುಣಗಳ ಸ್ಥಳದಲ್ಲಿ ಮೂರು ಸದ್ಗುಣಗಳು ಅವರ ಜೀವಿತದಲ್ಲಿ ಸೇರಿಸಲ್ಪಟ್ಟಿವೆ. ಈ ಸದ್ಗುಣಗಳು, ಸೌಹಾರ್ದಯುತವಾದ ಸಮುದಾಯವನ್ನು ಕಟ್ಟಲು ಸಹಾಯಿಸುವಂತವುಗಳು ಆಗಿದ್ದು, ಅವುಗಳು ಸಮುದಾಯವನ್ನು ನಾಶಮಾಡುವಂಥ ದುರ್ಗುಣಗಳ ವ್ಯತ್ಯಾಸವನ್ನು ಹೊಂದಿವೆ. **ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ** ಇರುವುದು ವರ್ತಮಾನ ವಿಧ್ಯರ್ಥಕ ಆಗಿದೆ ಮತ್ತು ಮುಂದುವರೆಯುವ ಕಾರ್ಯವಾಗಿದೆ. "ಉಪಕಾರಿ" ಇದು *chrēstos* ಭಾಷಾಂತರವಾಗಿದೆ ಮತ್ತು "ಕೃತಜ್ಞತೆಯ ಬದಲಾಗಿ ಒಳ್ಳೆಯ, ಸಭ್ಯ, ಪರೋಪಕಾರಿ ... ಯಾಗಿರುವದನ್ನು ಒಳಗೊಳ್ಳುತ್ತದೆ.[28] **ಕರುಣೆಯುಳ್ಳವ** (*eusplanchnos*) ಇದು "ದಯಾವುಳ್ಳ" ಎಂಬುದಕ್ಕೆ ಸಮಾನವಾದದ್ದಾಗಿದೆ.[29] *Eusplanchnos*ದ ಅಕ್ಷರಸಹ ಅರ್ಥವು "ಆರೋಗ್ಯಯುತ ಕರಳುಗಳು" ಎಂದಾಗಿದೆ.[30] *Splanchnon*ದ ಅರ್ಥವು

ಹೊಟ್ಟೆಯ ಒಳಗಿನ ಅಂಗಗಳು ಎಂಬರ್ಥವನ್ನು ಕೊಡುತ್ತವೆ. ಯಾವಾಗಲೂ ಈ ಪದವು "ಹೃದಯ" ಎಂಬಂತೆ ಇರುತ್ತದೆ, ಯಾಕೆಂದರೆ ಕರುಣೆಯು ಭಾವನೆಯ ಪೀಠದ ಮೇಲೆ ಇರುತ್ತವೆ ಎಂದು ಯೋಚಿಸಲಾಗುತ್ತದೆ.[31] **ಒಬ್ಬರಿಗೊಬ್ಬರು ಕ್ಷಮಿಸುವವರಾಗಿಯೂ ಇರಿ** ಎಂಬುದು ಕ್ಷಮಾಪಣೆಯಿಂದ ಪ್ರೇರೇಪಿತವಾಗಿದ್ದು ಕ್ರಿಸ್ತನ ಮೂಲಕ ದೇವರಿಂದ ಪಡೆದದ್ದು ಆಗಿದೆ. ಪತ್ರದ ಮೊದಲರ್ಧದಲ್ಲಿ ಎಫೆಸದವರು ಪಡೆದುಕೊಂಡ ಈ ಕ್ಷಮಾಪಣೆಯನ್ನು ಒತ್ತಿಹೇಳುತ್ತಾನೆ. ಆ ಕ್ಷಮಾಪಣೆಯನ್ನು ಪಡೆಯುವದು ಸಭೆಯ ಸಮುದಾಯದ ಒಳಗೆ ಇದ್ದು ಸಂಬಂಧದಿಂದ ಹೊರಗೆ ಜೀವಿಸುವದೇ ಆಗಿದೆ ಎಂದು 4:1-32ರಲ್ಲಿ ಆತನು ಒತ್ತಿ ಹೇಳುತ್ತಾನೆ (ನೋಡಿರಿ ಮತ್ತಾಯ 6:14, 15).

4:17-32ರ ಬುದ್ಧಿವಾದದ ಜೊತೆ, ಎಫೆಸ ಪತ್ರಿಕೆಯ ಅನ್ವಯ ಭಾಗದ ಮೊದಲ ಭಾಗವನ್ನು ಪೌಲನು ಮುಗಿಸುತ್ತಾನೆ. ಸಭೆಯ ಸದಸ್ಯರು ತಮ್ಮ ಕರೆಯುವಿಕೆಯಲ್ಲಿ ಐಕ್ಯವಾಗಿ ಯೋಗ್ಯನಡೆಯಲ್ಲಿ ನಡೆಯುವವರಾಗಿರುವರು ಮತ್ತು ನೂತನ ಮನಸ್ಸನ್ನು ಹೊಂದಿರುವವರೂ ಆಗಿದ್ದಾರೆ.

## ಅನ್ವಯ

### ಸಿದ್ಧರಾಗಿರುವದು, ಪುನರುತ್ಥಾನದ ರೀತಿಯಲ್ಲಿ (4:17-32)

ಯೋಹಾನ 11ರಲ್ಲಿ, ಯೇಸುವಿನ ಸ್ನೇಹಿತನಾದ ಲಾಜರನು ಸತ್ತು ಹೋದನು ನಾವು ಓದುತ್ತೇವೆ. ಈ ಸಮಯದಲ್ಲಿ ಯೇಸುವು ಬೇಥಾನ್ಯವನ್ನು ತಲುಪಿದನು, ಆದಾಗಲೇ ಲಾಜರನು ಸಾಮಾಧಿಯಲ್ಲಿ ಇದ್ದು ನಾಲ್ಕು ದಿನವಾಗಿತ್ತು. ಸಮಾಧಿಯ ಮುಂದಿಟ್ಟ ಕಲ್ಲನ್ನು ತೆಗೆದುಹಾಕಲು ಯೇಸು ಹೇಳಿದಾಗ ಮಾರ್ತಳು "ಸ್ವಾಮೀ ಅವನು ಸತ್ತು ಆಗಲೇ ನಾಲ್ಕು ದಿನವಾಯಿತು ಈಗ ನಾತ ಹುಟ್ಟಿದೆ" ಎಂದು ಹೇಳಿದಳು (ಯೋಹಾನ 11:39). ಆ ಕಲ್ಲನ್ನು ಉರುಳಿಸಿರು ಎಂದು ಯೇಸು ಸೂಚಿಸಿದನು. ನಂತರ ಆತನು ಘಟ್ಟಿಯಾದ ಧ್ವನಿಯಲ್ಲಿ "ಲಾಜರನೇ ಹೊರಗೆ ಬಾ" ಎಂದು ಘಟ್ಟಿಯಾದ ಧ್ವನಿಯಲ್ಲಿ ಕೂಗಿಕರೆದನು (ಯೋಹಾನ 11:43). "ಸತ್ತಿದ್ದವನು ಹೊರಗೆ ಬಂದನು ಅವನ ಕೈಕಾಲುಗಳು ಬಟ್ಟೆಗಳಿಂದ ಕಟ್ಟಿದ್ದವು. ಅವನ ಮುಖವು ಕೈಪಾವುಡದಿಂದ ಸುತ್ತಿತ್ತು. ಯೇಸು ಅವರಿಗೆ 'ಅವನನ್ನು ಬಿಚ್ಚಿರಿ, ಹೋಗಲಿ' ಎಂದನು" ಎಂದು ವೇಧಭಾಗವು ಹೇಳುತ್ತದೆ (ಯೋಹಾನ 11:44). ಲಾಜರನು ಜೀವದಿಂದ ಇರುವುದಕ್ಕೋಸ್ಕರ ಮರಣದ ಕಪಿಮುಷ್ಟಿಗೆ ಒಪ್ಪಿಸಲ್ಪಡಲಿಲ್ಲ.

ಎಫೆಸ ಪತ್ರಿಕೆಯಲ್ಲಿ ಪೌಲನು ಹೇಳುತ್ತಿರುವದು ಹೋಲಿಕೆಗಳ ರೀತಿಯ ಮೂಲಕ ಆಗಿದೆ. ಅಧ್ಯಾಯ 2ರ ಪ್ರಕಾರ, ಎಫೆಸದವರು ತಮ್ಮ ಪಾಪಗಳಿಂದ ದೇವರ ಮುಂದೆ ಸತ್ತು ಹೋಗಿದ್ದರು, ಆದರೆ ಆತನು ಅವರನ್ನು ಎಬ್ಬಿಸಿದನು ಮತ್ತು ಅವರಿಗೆ ನೂತನ ಜೀವಿತವನ್ನು ಕೊಟ್ಟನು. ಒಬ್ಬನು ಆತ್ಮೀಕ ಸಮಾಧಿಯ ಬಟ್ಟೆಗಳಿಂದ ಹೇಗೆ ಹೊರಬರಬಹುದು ಮತ್ತು ಪುನರುತ್ಥಾನ ರೀತಿಯಲ್ಲಿ ಹೇಗೆ ಸಿದ್ಧವಾಗಬಹುದು? ಇದರ ಬಗ್ಗೆ ಪೌಲನು ಮಾತನಾಡಿದಂತೆ, ಇದನ್ನು ಆತನು ಮೂರು ಭಾಗಗಳಲ್ಲಿ ಮಾಡಿದ್ದಾನೆ.

(1) *ಹಿಂದಿನ ವಂಚನೆ* (4:17-19).

> ಆದುದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನುಮೇಲೆ ನಡೆದುಕೊಳ್ಳುವಬಾರದೆಂದು ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೇನೆ. ಇವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡಕೊಳ್ಳುತ್ತಾರೆ. ಅವರ ಮನಸ್ಸು ಮೊಬ್ಬಾಗಿ ಹೋಗಿದೆ. ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ. ಅವರು ತಮ್ಮ ದುಸ್ಥಿತಿಗಾಗಿ ಸ್ವಲ್ಪವೂ ಚಿಂತಿಸದೆ ತಮ್ಮನ್ನು ಬಂಡುತನಕ್ಕೆ ಒಪ್ಪಿಸಿಕೊಟ್ಟು ಎಲ್ಲಾ

ವಿಧವಾದ ಅಶುದ್ಧಕೃತ್ಯಗಳನ್ನು ಅತ್ಯಾಶೆಯಿಂದ ನಡೆಸುವವರಾಗಿದ್ದಾರೆ (4:17-19).

ಈ "ಅನ್ಯಜನರು" ಎಂಬ ಪದಕ್ಕೆ "ಅಮೇರಿಕನ್ನರು, " "ಯುರೋಪಿಯನ್ನರು" ಇನ್ನೂ ಕೆಲ ಹೆಸರುಗಳನ್ನು ನಾವು ಕೊಡಬಹುದು ಮತ್ತು ಈ ಪರಿಚ್ಛೇದವು ಈ ಹೊತ್ತು ಮುಂಜಾನೆ ಪೌಲನಿಂದ ಬರೆಯಲ್ಪಟ್ಟಿದೆ ಎಂದು ಯೋಚಿಸಬೇಕು. ಇದು ಇಂದಿನ ವಿವಿಧ ಸಮಾಜಗಳ ವಿವರಣಾ ಚಿತ್ರವಾಗಿದೆ.

ಯೇಸುವನ್ನು ಅರಿಯದವರ ಯೋಚನಾ ಗತಿಯನ್ನು ಪೌಲನು ವಿವರಿಸಿದ್ದಾನೆ: ಅವರ ಯೋಚನೆಯು ನಿಷ್ಪ್ರಯೋಜಕವಾಗಿದ್ದು, ಮತ್ತು ಅವರ ಅರಿತುಕೊಳ್ಳುವ ಸಾಮರ್ಥ್ಯದಲ್ಲಿ ಅವರು ಕತ್ತಲಾಗಿದ್ದಾರೆ; ಅದರ ಪರಿಣಾಮವಾಗಿ ಅವರು ಅಲಕ್ಷ್ಯವುಳ್ಳವರಾಗಿದ್ದಾರೆ. ಅವರ ಖಾಲಿ ಮನಸ್ಸು, ಅರಿತುಕೊಳ್ಳಲು ಕತ್ತಲಾಗಿದೆ ಮತ್ತು ಅಲಕ್ಷತೆಯನ್ನು ಒಳಗಿರಿಸುವದು ಆಗಿದೆ. ವಿಫಲವಾದ ಮನಸ್ಸಿನ ಪರಿಣಾಮವು ಜೀವಿತವನ್ನು ವಿಫಲಗೊಳಿಸುವದು. ಅವರು ನಿರ್ಧಯಿಗಳೂ, ವ್ಯಭಿಚಾರಿಗಳೂ ಮತ್ತು ಅತೃಪ್ತಿ ಕಾಮಿಗಳೂ ಆಗುತ್ತಾರೆ.

4:17-19ರ ಮೂಲ ವಾಕ್ಯವು "ಕಠಿಣತೆ" ಆಗಿದೆ. ಕಠಿಣವಾದ ಹೃದಯವನ್ನು ಹೊಂದಿರುವವರ ಹೃದಯವು ಅಲಕ್ಷ್ಯತೆಯಿಂದ ತುಂಬಿರುತ್ತದೆ. ಅವರು ದೇವರ ಸತ್ಯಗಳನ್ನು ಕಲಿತುಕೊಳ್ಳಲು ನಿರಾಕರಿಸುತ್ತಾರೆ. ಅವರ ಕಾರ್ಯದ ನೈಜ ಮಹತ್ವವನ್ನು ಅರಿತುಕೊಳ್ಳಲು ಅಸಮರ್ಥವಾಗಿರುವದು ಅವರ ಅಲಕ್ಷ್ಯತೆಯ ಪರಿಣಾಮವು ಆಗಿದೆ. "ಕಠಿಣತೆ"ಗೆ ಪೌಲನ ಪದವು ಮೂಲತಃವಾಗಿ ಅಮೃತ ಶಿಲೆಗಿಂತ ಕಠಿಣ ಎಂದಾಗಿದೆ. ಇದು ನಂತರದಲ್ಲಿ ವೈದ್ಯರಿಂದ ಸೇರಿಸಲ್ಪಟ್ಟಿದ್ದು ವ್ಯಕ್ತಿಗಳ ಕೀಲುಗಳಲ್ಲಿರುವ ಅಂಶವಾಗಿದ್ದು ಕೀಲುಗಳು ಮಡಿಸುವುದರಿಂದ ತಡೆಗಟ್ಟುವದನ್ನು ವರ್ಣಿಸುವುದಾಗಿದೆ. ಇದು ಎಲುಬು ಮುರಿದ ರೀತಿ ಯಲ್ಲಿನ ಮತ್ತು ನಂತರದಲ್ಲಿ ಗುಣವಾದಾಗ ಎಲಬು ತನ್ನಷ್ಟಕ್ಕೆ ತಾನೇ ಕಳೆದುಕೊಳ್ಳುವದಕ್ಕೂ ಅನ್ವಯಿಸುವದು ಆಗಿದೆ. ಇದು ಬಲು ಗಟ್ಟಿಯಾದ ಒಂದನ್ನು ವರ್ಣಿಸುವುದಾಗಿದೆ, ಇದರಿಂದ ಆತಂತಮಯವಾದ ಅದು ಅನುಭವದ ಸಾಮರ್ಥ್ಯವನ್ನು ಕಳೆದುಬಿಡುತ್ತದೆ.

ಪೌಲನ ಪ್ರಕಾರ, ಇದು ದೇವರನ್ನು ಬಿಟ್ಟ ವ್ಯಕ್ತಿಯ ಸ್ಥಿತಿಯು ಆಗಿದೆ. ಪಾಪವು ಆತನ ಹೃದಯವನ್ನು ಆಂತಂಕಕ್ಕೆ ಒಳಗೆ ಮಾಡುತ್ತದೆ, ಆತನನ್ನು ನೈಜ ಮೌಲ್ಯಗಳಿಗೆ ಪ್ರತಿಕ್ರಯಿಸಿದಂತೆ ಮಾಡುತ್ತದೆ. ಆತನು ಸತ್ಯದ ಶ್ರೇಷ್ಟಾಂಗಗಳನ್ನು ತ್ಯಜಿಸುತ್ತಾನೆ ಮತ್ತು ತನ್ನದೇ ಆದ ಸರಿ ಮತ್ತು ತಪ್ಪು ಎಂಬ ತಪ್ಪು ಅಂಶಗಳನ್ನು ಸ್ಥಾಪಿಸಿಕೊಳ್ಳುತ್ತಾನೆ. ಪರಿಣಾಮವು ಜೀವನ ಶೈಲಿಯಾಗಿದ್ದು ಅದು ವಂಚನೆಯ ಗರ್ವದ ತೋರ್ಪಡುವಿಕೆಯು ಆಗಿದ್ದು, ಸಹಜ ವ್ಯಕ್ತಿತ್ವದ ರೀತಿಯಂತೆಯೇ ಇರುವುದು ಆಗಿದೆ. ನಾಚಿಕೆಯು ಕಳೆದು ಹೋಗಿದೆ ಮತ್ತು ಶಿಷ್ಟಾಚಾರವು ಮರೆಯಲ್ಪಟ್ಟಿದೆ. ಈ ರೀತಿಯಲ್ಲಿರುವಾಗ, ಆ ವ್ಯಕ್ತಿಯು ತನ್ನದೇ ಆದ ಇಚ್ಛೆಯ ಕರುಣೆಯಲ್ಲಿರುತ್ತಾನೆ; ತನ್ನ ಸ್ವಂತ ಇಚ್ಛೆಗಳು ತೃಪ್ತವಾಗುವ ತನಕ ಯಾರ ಜೀವಿತವನ್ನು ಆತನು ನೋಯಿಸುತ್ತಿದ್ದಾನೋ ಅಥವಾ ಯಾರ ಮುಗ್ದತೆಯನ್ನು ಆತನು ಹಾಳುಮಾಡುತ್ತಿದ್ದಾನೋ ಅದರ ಬಗ್ಗೆ ಆತನಿಗೆ ಚಿಂತೆಯಿಲ್ಲ.

ಯೇಸುವನ್ನು ನಾವು ಭೇಟಿಯಾಗುವ ಮುನ್ನ, ನಾವು ನಮ್ಮ ಹಳೆಯ ವಂಚನೆಯಿಂದ ನಾವು ಹಿಡಿಯಲ್ಪಟ್ಟಿದ್ದೇವು ಮತ್ತು ನಮ್ಮ ಯೋಚನೆಗಳು ಗಲಿಬಿಲಿಯುಳ್ಳವು ಆಗಿದ್ದವು. ನಮ್ಮಲ್ಲಿ ಕೆಲವರು ಸುಳ್ಳುಗಾರರೂ ಅಥವಾ ಮೋಸಮಾಡಲ್ಪಟ್ಟವರೂ ಮತ್ತು ಕಳವುಮಾಡಿದವರೂ ಆಗಿದ್ದೆವು. ಅನೇಕರು ದ್ವಿಮುಖಿಗಳೂ ಮತ್ತು ಆಡಿಕೊಳ್ಳುವವರೂ ಆಗಿದ್ದೆವು. ಬಹುಶಃ ನಾವು ಜನರನ್ನು ಅನುಕೂಲಕ್ಕಾಗಿ ತೆಗೆದುಕೊಳ್ಳುವವರೂ ಮತ್ತು ಯಶಸ್ಸಿನ ನಿಚ್ಚಣಿಕೆಯನ್ನು ಹತ್ತಲು ಯಾವುದು ಅವಶ್ಯವೋ ಅದನ್ನು ಆಡುವವರೂ ಆಗಿರಬಹುದು.

(2) *ಹೊಸ ಸೃಷ್ಟಿ* (4:20-24), ಆತ್ಮೀಕ ಹೊಸತನವು ಕ್ರಿಸ್ತನಲ್ಲಿ ಬರುವುದರ ಮೂಲಕ, ನಾವು ಮರಣದ ಬಟ್ಟೆಯನ್ನು ತೆಗೆದು ಹಾಕುತ್ತೇವೆ ಮತ್ತು ಪುನರುತ್ಥಾನಿತ ಜೀವನ ಶೈಲಿಯ

ಬಟ್ಟೆಯನ್ನು ಧರಿಸಿಕೊಳ್ಳುತ್ತೇವೆ. ಈ ಕಾರ್ಯದಡಿಯಲ್ಲಿರುವವರಿಗೆ ನಾಲ್ಕು ಗುಣಗಳು ಗುರುತು ಮಾಡಲ್ಪಟ್ಟಿವೆ.

ನಾವು ಸ್ವಾರ್ಥತನದಿಂದ ಸರಿದುಬಿಡುತ್ತೇವೆ (4:20). ಕ್ರಿಸ್ತನನ್ನು ತಿಳಿ ಎಂಬುದರ ಅರ್ಥವೇನು? ಇದರ ಅರ್ಥ ಆತನನ್ನು ಸ್ವೀಕರಿಸು ಮತ್ತು ಆತನೇ ಎಲ್ಲವೂ ಎಂದಾಗಿದೆ. ವೈಯಕ್ತಿಕ ಪ್ರವೃತ್ತಿ ಮತ್ತು ಇಚ್ಛೆಗಳನ್ನು ನಾವು ಇನ್ನು ಮುಂದೆ ಬೆನ್ನುಹತ್ತುವದು ಬೇಡ. ಬದಲಾಗಿ, ನಾವು ಯೇಸುವನ್ನು ಅರಿತುಕೊಳ್ಳುತ್ತೇವೆ - ಆತನ ಇಚ್ಛೆಗಳು ಯಾವವು, ಆತನು ಪ್ರೀತಿಸುವವುಗಳು ಯಾವವು, ಆತನಿಗೆ ಏನು ಬೇಕು ಎಂಬವು. ಜೀವನ ಕೇಂದ್ರವು ಸ್ವಾರ್ಥವಾಗಿರಬಾರದು, ಅದು ಕ್ರಿಸ್ತನಾಗಿರಬೇಕು.

ನಾವು ಅಲಕ್ಷತೆಯನ್ನು ಸತ್ಯದ ಜೊತೆ ಸಹ ಬದಲಾಯಿಸಬಹುದು (4:21). ನಾವು ಯೇಸುವನ್ನು ತಿಳಿದರೆ, ಯಾವದು ನಿಜ ಎಂದು ನಾವು ಅರಿಯುತ್ತೇವೆ. ಯೇಸು ಯೆಹೂದ್ಯರಿಗೆ "ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡರೆ ... ಸತ್ಯವನ್ನು ತಿಳುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" ಎಂದು ಹೇಳಿದನು (ಯೋಹಾನ 8:31, 32). ಸತ್ಯವು ವಂಚನೆಯ ಮಾರ್ಗದಿಂದ ತಪ್ಪಿಸುವುದಾಗಿದೆ. ಸತ್ಯವು ಜಗತ್ತಿನ ಪದ್ಧತಿಯನ್ನು ನೈಜವಾಗಿ ನೋಡಲು ಸಹಾಯಿಸುವದು ಮತ್ತು ಸರಿಯಾದ ತೀರ್ಪನ್ನು ಕೊಡುವದು. ಯೇಸು ಸತ್ಯವಾ ಗಿದ್ದಾನೆ; ಆತನನ್ನು ಅರಿಯಲು ಅಲುಗಾಡದಂಥ, ಬದಲಾಗದ ವರ್ಗದ ಮೂಲಕ ಜೀವಿ ಸುವದನ್ನು ಕಂಡುಹಿಡಿಯಬೇಕು.

ಪರಿಶುದ್ಧತೆಯಿಂದ ನಾಚಿಕೆಗೇಡುತನವನ್ನು ನಾವು ಸರಿಸಬೇಕು (4:22). ಪೂರ್ವದಲ್ಲಿ, ನಾವು ಪಾಪದ ಬಗ್ಗೆ ಅರಿವಿಲ್ಲದವರು ಆಗಿದ್ದೆವು. ಯೇಸುವಿನಲ್ಲಿ ನಾವು ಪಾಪದ ಬಗ್ಗೆ ಶ್ರೇಷ್ಟ ಅರಿವನ್ನು ಹೊಂದಿದ್ದೇವೆ ಮತ್ತು ಯಾವುದೇ ರೀತಿಯಲ್ಲೂ ಅದನ್ನು ಅಲಕ್ಷಿಸುವವರು ಆಗಿದ್ದೇವೆ. ಜೀವಿತದ ಶುದ್ಧತೆಯು ಒಬ್ಬ ಹೊಸ ಜೀವಿಯ ಪ್ರಮುಖ ಕಾಳಜಿ ಆಗಿರುತ್ತದೆ.

ಪಾಪದ ಬಗೆಗಿನ ಎಚ್ಚರಿಕೆಯನ್ನು ಕಳೆದುಕೊಳ್ಳುವದು ಮತ್ತು ಶುದ್ಧತೆಯ ಬಗ್ಗೆ ನಮ್ಮ ಪ್ರೇರೇಪಣೆಯು ಸಾಧ್ಯತೆಯುಳ್ಳದ್ದಾಗಿದೆ. ಅದೇ ಸ್ಥಳಕ್ಕೆ ಸಾಗುವುದನ್ನು, ಅದೇ ಜನರೊಡನೆ ಸಂಬಂಧ ಹೊಂದುವದನ್ನು ಮತ್ತು ಕ್ರಿಸ್ತನನ್ನು ಅರಿಯುವದಕ್ಕಿಂತ ಮುಂಚೆ ನಮ್ಮ ಜೀವನದಲ್ಲಿ ಗೆರೆಮಾಡಲ್ಪಟ್ಟದೇ ಕಾರ್ಯಗಳುಳ್ಳ ಪಾಲ್ಗೊಳ್ಳುವದನ್ನು, ಮುಂದುವರೆಸಿದಾಗ, ನಾವು ಪಾಪದ ಅರಿವನ್ನು ನಾವು ಕಳೆದುಕೊಳ್ಳುತ್ತೇವೆ. ಅದು ಸಂಭವಿಸಿದಾಗ, ನಾವು ನೀತಿವಂತಿಕೆಯತ್ತ ಸಾಗುವದನ್ನೂ ಕೂಡಾ ಕಳೆದುಕೊಳ್ಳುತ್ತೇವೆ.

ನಾವು ಪಾಪದಿಂದ ದಿಗ್ಭ್ರಮೆಗೊಳ್ಳಬೇಕೆಂದು ದೇವರು ಬಯಸುವವನಾಗಿದ್ದಾನೆ. ನಮ್ಮ ಹಿಂದಿನ ಜೀವನಶೈಲಿಯಿಂದ ನಾವು ನಾಚಿಕೊಳ್ಳಬೇಕು ಪಾಪಮಯವಾದ್ದರಿಂದ ನಮ್ಮನ್ನು ನಾವು ಮುತ್ತಿಕೊಂಡಿದ್ದೇ ಆದರೆ, ಆಗ ನಾವು ದೇವರು ಕೊಟ್ಟ ಕ್ರಿಸ್ತನಲ್ಲಿ ಜೀವಿಸಲು ಕರೆಯಲ್ಪಟ್ಟ ಜೀವಿತವನ್ನು ಜೀವಿಸಲು ನಾವು ಹೊಂದುವ ವಾಹಿನಿಯನ್ನು ನಾವು ಕ್ಷಿಪ್ರವಾಗಿ ಕಳಕೊಳ್ಳುತ್ತೇವೆ.

ನಾವು ನಮ್ಮ ಮನಸ್ಸನ್ನು ಖಂಡಿಸುವುದು ಬಹು ದೂರವೇನಿಲ್ಲ; ಬದಲಾಗಿ ನಾವು ನಮ್ಮ ಮನಸ್ಸನ್ನು ನೂತನಗೊಳಿಸಬೇಕು (4:23). ಒಂದು ಬದಲಾದ ಜೀವಿತವು ಬದಲಾದ ಮನಸ್ಸಿನೊಡನೆ ಪ್ರಾರಂಭವಾಗುತ್ತದೆ. ಒದಗಿ ವರ್ತಿಸುವದು, ನಾವು ಹೊಸದನ್ನು ಮೊದಲು ಯೋಚಿಸಲೇಬೇಕು. ಪೌಲನು ರೋಮದವರಿಗೆ "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದರಾಗಿರಿ. ಹೀಗಾದರೆ ದೇವರ ಚಿತ್ತಾನುಸಾರವಾದದ್ದು ಅಂದರೆ ಉತ್ತಮವಾದ್ದು ಮೆಚ್ಚಿಕೆಯಾದದ್ದು ದೋಷವಿಲ್ಲದ್ದೂ ಯಾವುದೆಂದು ವಿವೇಚಿಸಿ ತಿಳುಕೊಳ್ಳುವಿರಿ" ಎಂದು ಹೇಳಿದನು (ರೋಮಾಪುರ 12:2).

ನಮ್ಮ ಮನಸ್ಸನ್ನು ಹೇಗೆ ಪರಿವರ್ತಿಸಿಕೊಳ್ಳಬೇಕು? ದೇವರ ಆಲೋಚನೆಯ ವಿಚಾರದ ಸಾಮರ್ಥ್ಯದ ಆರಂಭವು ಜ್ಞಾನದ ಮೂಲಕ ಬರುವುದಾಗಿದೆ. ಕೊಲಸ್ಸೆ 3:10ರಲ್ಲಿ,

ಪೌಲನು "ಈ ಸ್ವಭಾವವು ನಿಮ್ಮನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ" ಎಂದು ಹೇಳುತ್ತಾನೆ.

ಜ್ಞಾನದ ಮೂಲಕ ನಾವು ಪುನಃ ಶಕ್ತಿಯುತರು, ಉತ್ತೇಜಿತರೂ ಮತ್ತು ಉತ್ಪಾದಕತ್ವವುಳ್ಳ ಕ್ರೈಸ್ತರೂ ಆಗುತ್ತೇವೆ, ಹೊರತು ಭಾವೋದ್ರೇಕದಿಂದಲ್ಲ. ಜ್ಞಾನವು ದೇವರ ವಾಕ್ಯದ ಮೂಲಕ ಬರುವುದಾಗಿದೆ. ಆತನ ವಾಕ್ಯದ ಜೊತೆ ನಮ್ಮ ಮನಸ್ಸನ್ನು ತುಂಬುವ ಮೂಲಕ, ನಾವು ದೈವೀಯ ವಿಚಾರಗಳನ್ನು ಯೋಚಿಸಲು ಆರಂಭಿಸಬಹುದು. ನಾವು "(ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ) ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವರ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ" (4:24).

(3) *ಪ್ರಸ್ತುತ ನಡತೆ* (4:25-29). ನಾವು ನಮ್ಮ ಆತ್ಮೀಕತೆಯು ಸಮಾಧಿಯ ಬಟ್ಟೆಗಳನ್ನು ತೆಗೆದು ಬಿಟ್ಟಿದ್ದಾದರೆ ಮತ್ತು ನಿಜ ನೀತಿವಂತಿಕೆಯ ಮತ್ತು ಪರಿಶುದ್ಧತೆಯ ಹೊಸ ಬಟ್ಟೆಗಳನ್ನು ಧರಿಸಿದ್ದಾದರೆ, ಪ್ರಾಯೋಗಿಕವಾಗಿ ಇದರ ಅರ್ಥವೇನು? ಹೊಸತನಕ್ಕಾಗಿ ನಾವು ಯೇಸುವನ್ನು ನೋಡುವಾಗ ನಮ್ಮ ನಡತೆಯು ಹೇಗೆ ಬದಲಾಗುತ್ತದೆಂದು ಪೌಲನು ಕೆಲ ಉದಾಹರಣೆಗಳನ್ನು ಕೊಡುತ್ತಾನೆ.

ಅಪ್ರಾಮಾಣಿಕತೆಯು ಸತ್ಯತೆಯನ್ನು ಬದಲಾಯಿಸುವುದಾಗಿದೆ (4:25). ಜನರು ತಾವು ಬಯಸಿದ್ದನ್ನು ಪಡೆಯುವುದಕ್ಕೋಸ್ಕರ ಸುಳ್ಳು ಹೇಳುವ ಅಮಿಷಕ್ಕೆ ಒಳಗಾಗುತ್ತಾರೆ, ಆದರೆ ನಾವು ಅದನ್ನು ಬಲು ಸಮಯದವರೆಗೆ ಮಾಡಲಾರೆವು. ಸುಳ್ಳು ಹೇಳುವದು ಕ್ರೈಸ್ತರಾದಂಥ ನಮ್ಮ ಜೀವಿತದ ಭಾಗವಲ್ಲ. ಸುಳ್ಳು ಹೇಳುವ ಎಲ್ಲಾ ರೀತಿಯು, ಸತ್ಯದ ವಿಕೃತಿ, ಅತಿಶಯೋಕ್ತಿ, ಶಾಲೆಯಲ್ಲಿ ಅಥವಾ ಉದ್ಯೋಗದಲ್ಲಿ ಮೋಸಮಾಡುವದು, ವಾಗ್ದಾನವನ್ನು ಕೈಕೊಳ್ಳುವಲ್ಲಿ ವಿಫಲವಾಗುವದು, ನೇಮಗಳನ್ನು ಮಾಡುವದು, ಮತ್ತು ನಮ್ಮ ಕೆಲಸದ ಅಥವಾ ಉತ್ಪಾದನೆಯ ದಬ್ಬಾಳಿಕೆ ಇವನ್ನು ಒಳಗೊಂಡಿದೆ ಎಂಬುದು ಪೌಲನ ಮಾತಿನ ಅರ್ಥ.

ಸುಳ್ಳನ್ನು ಕೊಲ್ಲುವ ಮಾರ್ಗ ಎಂದರೆ ಸತ್ಯವನ್ನು ಹೇಳುವದು ಆಗಿದೆ. ನಾವು ಎಲ್ಲೇ ಇರಲಿ, ನಾವು ಸತ್ಯವನ್ನು ಹೇಳಲೇಬೇಕು. ಮುಂದೆ, ನಾವು ಸತ್ಯವನ್ನು ಪ್ರೀತಿಯಲ್ಲಿ ಹೇಳುವವರಾಗಿದ್ದೇವೆ (ನೋಡಿರಿ 4:15). ಇದು ನಾವೇ ಏನು ಹೇಳುತ್ತೇವೆಯೋ ಅದು ಮಾತ್ರವಲ್ಲ, ಆದರೆ ನಾವು ಯಾವುದನ್ನು ಹೇಗೆ ಹೇಳುತ್ತೇವೆ ಎಂಬುದೂ ಸಹ, ನಮ್ಮನ್ನು ಹೊಸ ಸೃಷ್ಟಿಯನ್ನಾಗಿ ಮಾಡುತ್ತದೆ. ನಾವು ಮಾತನಾಡುವ ಸತ್ಯವು ನಾವು ಮಾತನಾಡುತ್ತಿರುವವರೊಂದಿಗೆ ನಮ್ಮ ಪ್ರೀತಿಯು ಪ್ರೇರೇಪಿಸಲ್ಪಡುವುದಾಗಿದೆ.

ಸತ್ಯತನದಲ್ಲಿರುವುದಕ್ಕೆ ನಮ್ಮ ಪ್ರೇರಣೆಯು ಏನು? "ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವೆ." ನಮ್ಮ ಕೈಗಳಿಗೆ ನಮ್ಮ ಬಾಯಿಯ ಸ್ಥಳದ ಬಗ್ಗೆ ನಮ್ಮ ಮೆದುಳು ಸುಳ್ಳಾಡಿದ್ದೆ ಆದರೆ ಎಂಥ ಕಷ್ಟದ ಅನುಭವ ಆಗಬಹುದು. ಊಟಕ್ಕಾಗಿ ಪ್ರಯತ್ನಿಸುವದು ಒಂದು ವಿನಾಶಕರವಾಗುತ್ತದೆ. ಒಂದು ದೇಹದ ಎಲ್ಲಾ ಅಂಗಗಳು ಪ್ರತಿಯೊಂದು ಅಂಗಗಳೊಂದಿಗೆ ಸತ್ಯವಾಗಿ ಇಲ್ಲದೆ ಹೋದರೆ ಅದು ಸರಿಯಾಗಿ ಕೆಲಸ ಮಾಡದು.

ನಿಯಂತ್ರಿತ ಭಾವನೆಗಳು ಅನಿಯಂತ್ರಿತವಾದವುಗಳನ್ನು ತೆಗೆದು ಹಾಕುತ್ತವೆ (4:26, 27). ಕೋಪವು ದೇವರು ಕೊಟ್ಟ ಭಾವನೆ, ಕೋಪ ತನ್ನಷ್ಟಕ್ಕೆ ತಾನೇ ಕೆಟ್ಟದ್ದಲ್ಲ. ಯೇಸುವೂ ಕೂಡ ಒಂದು ಸಂದರ್ಭದಲ್ಲಿ ಕೋಪಗೊಂಡನು (ನೋಡಿರಿ ಮಾರ್ಕ 3:5). ತಪ್ಪಾದದಕ್ಕೆ ನಮ್ಮನ್ನು ನಡೆಸುವ ಕೋಪವು ಕೆಟ್ಟದ್ದಾಗಿದೆ.

ಸಮಾಜದಲ್ಲಿನ ಜಗಳ, ಗುಂಡುಹಾಕುವದು, ಮತ್ತು ಇತರ ದೊಂಬಿಯ ಕಥೆಗಳನ್ನು ವರ್ತಮಾನಪತ್ರಿಕೆಯು ಹೇಳುತ್ತದೆ. ರೋಷ ಮೇರೆಯು ಮಿತಿಮೀರಲ್ಪಟ್ಟಿರುತ್ತದೆ. ನಾವು ಆ ರೀತಿ ಯಲ್ಲಿ ವರ್ತಿಸಬಾರದು ಎಂದು ಪೌಲನು ಹೇಳುತ್ತಾನೆ. ಕೋಪದಲ್ಲಿಯೂ ಕೂಡಾ, ನಾವು ಪಾಪಮಾಡಬಾರದು. ನಮ್ಮ ಭಾವೋದ್ರೇಕವನ್ನು ನಮ್ಮ ಮಿತಿಯಲ್ಲಿ ಇಟ್ಟುಕೊಳ್ಳಬೇಕು. ಯಾರಾದರೂ ನಮಗೆ ಕೋಪವೆಬ್ಬಿಸಿದರೆ, ಅದನ್ನು ಸಮಾಧಾನ ರೀತಿಯಲ್ಲಿ ಇಂದು

ಪರಿಹರಿಸಬೇಕು. ಕೋಪವನ್ನು ಶೇಖರವಾಗಲು ಬಿಡಬಾರದು ಅಥವಾ ದಿನದಿಂದ ದಿನಕ್ಕೆ ಕೆಟ್ಟದ್ದಾಗಲೂ ಬಿಡಬಾರದು. ನಾವು ಹಾಗೆ ಮಾಡಿದ್ದಾದರೆ, ನಮ್ಮನ್ನು ನಾವು ತಪ್ಪಾದ ಮಾರ್ಗದಲ್ಲಿ ವರ್ತಿಸುವವರಲ್ಲಿ ಕಂಡುಕೊಳ್ಳಬಹುದು. ಬದಲಾಗಿ, ಯಾರೊಡನಾದರೂ ನಾವು ಮೊದಲು ಕೋಪಗೊಂಡಿದ್ದಾದರೆ, ಪ್ರೀತಿಯಿಂದ ಆ ಸಹೋದರ ಅಥವಾ ಸಹೋದರಿಯ ಹತ್ತಿರ ಹೋಗಬೇಕು ಮತ್ತು ಆ ಕಿರಿಕಿರಿಯ ಕಾರಣವನ್ನು ಬಗೆಹರಿಸಬೇಕು. ಅದನ್ನು ಮಾಡಲು ವಿಫಲರಾಗಿದ್ದಾದರೆ, ನಾವು ಸೈತಾನನಿಗೆ ನಮ್ಮ ಜೀವಿತದಲ್ಲಿ ನಿಂತುಕೊಳ್ಳಲು ಸ್ಥಳಕೊಟ್ಟ ಹಾಗೆ ಆಗುತ್ತದೆ. ಅದೇ ಸಮಯದಲ್ಲಿ, ಆತನು ಆ ಕೋಪದ ಮೂಲಕ ನಮ್ಮ ನಾಶಮಾಡುತ್ತಾನೆ.

ಸಾಧನೆಯ ಕಳುವಾಗಿ ಬದಲಾಗುತ್ತದೆ (4:28). ಪೌಲನು ಸಾಮಾನ್ಯವಾಗಿ ಕಳವುಮಾಡಿದ್ದರ ಬಗ್ಗೆ ಹೇಳಿದ್ದಾನೆ, ಆದರೆ ನಾವು ಕೆಲ ನಿರ್ಧಿಷ್ಟಗಳನ್ನು ಕೊಡಬಹುದು. ಕ್ರೈಸ್ತರು ಮಾರುಕಟ್ಟೆಯಲ್ಲಿನ ಕಾರನ್ನಾಗಿ ಅಥವಾ ಒಂದು ಹಿಡಿ ದ್ರಾಕ್ಷೆಯನ್ನಾಗಿ ಕಳವು ಮಾಡಬಾರದು. ಕ್ರಿಸ್ತನ ದೇಹದ ಸದಸ್ಯರಾದ ನಾವು, ಹುಸಿಮಾಡುವ ದಾಖಲೆಗಳನ್ನು ಹೊಂದಿರಬಾರದು ಅಥವಾ ಸಾಲವನ್ನು ಹಿಂದಿರುಗಿಸುವದಕ್ಕೆ ನಿರಾಕರಿಸಬಾರದು. ನಾವು ಕೊಂಡಿದ್ದಕ್ಕೆ ಹಣನೀಡುವಾಗ ಬಲುವಾದ ಬದಲಾವಣೆಯನ್ನು ನಾವು ಎದುರುನೋಡ ಬಾರದು; ನಾವು ಹೆಚ್ಚು ಹಣಕೊಟ್ಟಿದ್ದಾದರೆ ಆ ದೋಷವನ್ನು ನಾವು ಸರಿಪಡಿಸಬಹುದು. ಒಬ್ಬನ ಕಳುವಿನ ಅಥವಾ ಕ್ಷುದ್ರಕಳ್ಳನ ಬಗೆಗಿನ ಪ್ರಶ್ನೆಯಾದರೆ, ಪೌಲನು ಒಂದು ಉತ್ತರವನ್ನು ಕೊಡುತ್ತಾನೆ. "ಕಳವುಮಾಡಬೇಡ."

ಸರಿಯಾದ ಪದವು ವಂಚನೆಯನ್ನು ಬದಲಾಯಿಸುತ್ತದೆ (4:29). ಹೊಸ ಸೃಷ್ಟಿಯಾದಂತೆ, ನಾವು ನಮ್ಮ ಮಾತುಗಳನ್ನು ಬದಲಾಯಿಸಬೇಕು. ಬೇಗನೇ ಜಗತ್ತು ಅರಿಯುವ ಮಾರ್ಗವು ನಾವು ಇನ್ನೂ ಮೇಲೆ ಹಳೆಯ ವಂಚನೆಯ ಭಾಗವಾಗಿರುವಂಥದ್ದು ನಮ್ಮ ಬಾಯನ್ನು ಶುದ್ಧಿಗೊಳಿಸುವದು ಆಗಿದೆ. "ನಿಮ್ಮ ಬಾಯಿಂದ ಮಾತುಗಳು ಬರುವಾಗ (ಅಕ್ಷರಸಹ, 'ಕೊಳೆತು ಹೋದ') ಅನಾರೋಗ್ಯಕರವುಳ್ಳವರಾಗಬಾರದು ಎಂದು ಪೌಲನು ಹೇಳುತ್ತಾನೆ." ನಾವು ಶಾಪದ ಮಾತುಗಳನ್ನು ಪೊಳ್ಳು ಹರಟೆಯನ್ನು, ದೂಷಣೆಯನ್ನು, ಅಯೋಗ್ಯವಾದ ಹಾಸ್ಯವನ್ನು ಅಲಕ್ಷಿಸಬೇಕು. ನಮ್ಮ ಬಾಯಿಂದ ಬಳಸುವ ಎಲ್ಲಾ ತರದ ನಕಾರಾತ್ಮಕ ಮಾರ್ಗಗಳನ್ನು ತೆಗೆದುಹಾಕಬೇಕು ಮತ್ತು ವಂಚಿತವಾದ ಮಾತುಗಳು ಇತರರನ್ನು ಕಟ್ಟುವ ಪ್ರೋತ್ಸಾಹದಾಯಕ ಕ್ರಿಸ್ತನನ್ನು ಪ್ರತಿಬಿಂಬಿಸುವ ಮಾತುಗಳಾಗಿ ಅಂದರೆ ಪರಿವರ್ತಿತ ಮಾಡಬೇಕು.

*ಮುಕ್ತಾಯ.* ಎಫೆಸ 4:30 "ದೇವರ ಪವಿತ್ರಾತ್ಮನನ್ನು ದುಖಪಡಿಸಬೇಡಿರಿ. ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದಿರಲ್ಲಾ" ಎಂದು ಹೇಳುತ್ತದೆ. ನಾವು ತಿರುಗಿ ಹುಟ್ಟಿದದಿನದಂದು, ನಾವು ಆ. ತನವರು ಎಂದು ತೋರ್ಪಡಿಸುವ ಹಾಗೆ ದೇವರು ಪರಿಶುದ್ಧಾತ್ಮನಿಂದ ಮುದ್ರೆಹಾಕಿದನು (ನೋಡಿರಿ 1:13, 14). ಆತನು ನಮ್ಮಲ್ಲಿ ವಾಸಿಸುತ್ತಿದ್ದಂತೆಯೇ, ನಾವು ಆತನಿಗೆ ಸಂತೋಷತರಿಸಬಹುದು ಅಥವಾ ಆಶಾಭಂಗಪಡಿಸಬಹುದು. ಆತನ ದುಃಖವನ್ನು ತಂದಿಲ್ಲ ಎಂದು ಹೇಗೆ ನಾವು ಖಚಿತಪಡಿಸಿಕೊಳ್ಳಬಹುದು? "ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನು ಸಕಲವಿಧವಾದ ದುಷ್ಟತನವನ್ನು ನಿಮ್ಮಿಂದ ದೂರಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ" (4:31, 32).

ಬಿಡುಗಡೆಯಾಗದ ಜನರ ಈ ಅಭಿವ್ಯಕ್ತಿತ್ವದಲ್ಲಿ ಮತ್ತು ಕಾರ್ಯದಲ್ಲಿ ನಮ್ಮನ್ನು ನಾವು ಧರಿಸಿಕೊಂಡಾಗ, ನಮ್ಮ ಉನ್ನತ ಜೀವಿತದ ರೀತಿಗಾಗಿ ಕರೆದ ಆತ್ಮನಿಗೆ ನಾವು ದುಃಖವನ್ನು ತರುವವರಾಗಿರುತ್ತೇವೆ. ಆತ್ಮೀಕವಾಗಿ ಮರಣಿಸಿದ ದಿರಿಸನ್ನು ನೈತಿಕ ದಿರಿಸಾಗಿ ನಾವು

ಬದಲಾಯಿಸಿಕೊಂಡಾಗ, ಆಗ ನಾವು ಯೋಗ್ಯವಾದ ಪುನರುಥಾನಿತ ರೀತಿಯ ದಿರಿಸನ್ನು ಹೊಂದಿರುತ್ತೇವೆ. ಅದು ಕ್ರಿಸ್ತನಲ್ಲಿ ಹೊಸ ಜೀವಿತವನ್ನು ನಮಗೆ ತಂದಂಥ ಆತ್ಮನಿಗೆ ಸಂತೋಷವನ್ನು ತರುತ್ತದೆ. Chris Bullard

---

ಟಿಪ್ಪಣಿಗಳು

[1]Andrew T. Lincoln, *Ephesians,* Word Biblical Commentary, vol. 42 (Dallas: Word Books, 1990), 277. [2]Spiros Zodhiates, ed., *The Complete Word Study New Testament,* 2d ed. (Chattanooga, Tenn.: AMG Publishers, 1991), 953-54. [3]S. D. F. Salmond, “The Epistle to the Ephesians,” in *The Expositor’s Greek Testament,* ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:340. [4]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 508. [5]Kenneth S. Wuest, *Wuest’s Word Studies from the Greek New Testament for the English Reader: Ephesians and Colossians* (Grand Rapids, Mich.: Wm. B. Eerdmans Publishing Co., 1953), 107. [6]Salmond, 340. [7]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 169, 111. [8]Lincoln, 280. [9]Wuest, 109. [10]Lincoln, 284.

[11]Wuest, 110. [12]Ibid. [13]Zodhiates, 869, 866. [14]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 499. [15]Wuest, 111. [16]Salmond, 345. [17]Wuest, 112. [18]Lincoln, 302. [19]Adapted from Wuest, 114-15. [20]Zodhiates, 867.

[21]Lincoln, 304. [22]Salmond, 347. [23]Ibid. [24]Lincoln, 306. [25]Bauer, 604. [26]These definitions are given in Lincoln, 308-9; Wuest, 117. [27]Zodhiates, 882. [28]Bullinger, 431. [29]Wuest, 117. [30]Bauer, 413.

[31]Ibid., 938.